ಮುಸ್ಲಿಮ್ ಪರ್ಸನಲ್ ಲಾ

(ಶರೀಅತ್)

ಮತ್ತು

ಸಮಾನ ಸಿವಿಲ್ ಕೋಡ್

✍ ಮೌಲಾನಾ ಶಮ್ಸ್ ಪೀರ್ಝಾದ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

1985ರ ಎಪ್ರಿಲ್‌ನಲ್ಲಿ ಸುಪ್ರೀಮ್ ಕೋರ್ಟ್ ಶಾಹಬಾನು ಮುಹಮ್ಮದ್ ಅಹ್ಮದ್ ಖಾನ್ ಖಟ್ಲೆಯಲ್ಲಿ ನೀಡಿದ ತೀರ್ಪು ಮುಸಲ್ಮಾನರಲ್ಲಿ ಅತ್ಯಂತ ಕಳವಳ ಮತ್ತು ಆತಂಕಕ್ಕೆ ಕಾರಣವಾಗಿತ್ತು. ಅವರ ಈ ಕಳವಳವನ್ನು ಕಂಡು ವಿಚಾರವಾದಿಗಳೆನಿಸಿದವರು ಮತ್ತು ಹೊಸ ಸಂಸ್ಕೃತಿಯ ಪ್ರೇಮಿಗಳು ದಿಗ್ಭ್ರಮೆಗೊಳಗಾಗಿ ಈ ಸಮಸ್ಯೆಗೆ ಅನಗತ್ಯ ಮಹತ್ವ ನೀಡಿದರು. ಈಗ ರಾಜಕೀಯ, ಆರ್ಥಿಕ ಇತ್ಯಾದಿ ರಂಗಗಳನ್ನು ಧರ್ಮದಿಂದ ಸ್ವತಂತ್ರಗೊಳಿಸಿರುವಂತೆಯೇ ಜೀವನದ ಸಾಮಾಜಿಕ ರಂಗವನ್ನೂ(ಸಂಪೂರ್ಣವಾಗಿ) ಸ್ವತಂತ್ರಗೊಳಿಸಬೇಕು ಎಂಬುದೇ ಅವರ ಇಂಗಿತ. ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಚಲಾವಣೆಯಲ್ಲಿರುವ ಸೆಕ್ಯೂಲರಿಸಂನ ನಾಣ್ಯವನ್ನು ಅವರು ಮನೆಯೊಳಗೂ ಚಲಾವಣೆಗೆ ತರಬಯಸುತ್ತಾರೆ. ಈ ದೃಷ್ಟಿಕೋನದ ಜನರು ಇಸ್ಲಾಮ್ ಧರ್ಮವನ್ನು ಇತರ ಧರ್ಮಗಳ ಸಾಲಿಗೆ ತರಬಯಸುತ್ತಾರೆ. ಇಸ್ಲಾಮ್ ದೈವಿಕ ಧರ್ಮ ಮತ್ತು ಸಮಗ್ರ ಜೀವನ ಕ್ರಮವೆಂಬ ಸತ್ಯವು ಅವರ ವಿಚಾರಕ್ಕೆ ನಿಲುಕಲಿಲ್ಲ. ಒಂದು ವೇಳೆ ಇಸ್ಲಾಮ್‌ನ ಸಾಮಾಜಿಕ ವಿಧಿಗಳು ದೇವದತ್ತವಾಗಿದ್ದರೂ ಅದರಲ್ಲಿ ಪರಿವರ್ತನೆಯ ಹಕ್ಕು ಮನುಷ್ಯರಿಗೆ ಇರಬೇಕೆಂದೇ ಅವರ ವಾದ. ಮುಸ್ಲಿಮ್ ಪರ್ಸನಲ್ ಲಾ ಎಂದರೇನೆಂದೇ ತಿಳಿಯದವರೂ ನಮ್ಮಲ್ಲಿ ವಿರಳವಲ್ಲ.

ಇಂಥವರೇ ಹೆಚ್ಚಾಗಿ ಮುಸ್ಲಿಮ್ ಪರ್ಸನಲ್ ಲಾ ದಲ್ಲಿ ಆಗುವ ತಿದ್ದುಪಡಿಗೆ ಪ್ರತಿಭಟನೆ ಮಾಡುವವರನ್ನು ಮೂದಲಿಸುತ್ತಾರೆ. ಮುಸ್ಲಿಮ್ ಪರ್ಸನಲ್ ಲಾ ಎಂದರೆ ಅವರ ಮಟ್ಟಿಗೆ ಒಂದಕ್ಕಿಂತ ಹೆಚ್ಚು ಮದುವೆ ಮಾಡುವ ಪರ್ಮಿಟು. ಓರ್ವ ಪತ್ನಿ ಇರುತ್ತಾ ಮರು ಮದುವೆ ಮಾಡುವ ಅವಕಾಶವನ್ನು ಇಸ್ಲಾಮ್ ನ್ಯಾಯ ಪಾಲಿಸುವ ಶರತ್ತಿನೊಂದಿಗೆ ನೀಡಿರುವುದರಿಂದ 'ಅದು ಕೇವಲ ಒಂದು ಅನುಮತಿ. ಅದೊಂದು ಆಜ್ಞೆಯಲ್ಲ. ಆದ್ದರಿಂದ ಬಹುಪತ್ನಿತ್ವವನ್ನು ನಿಷೇಧಿಸುವ ಕಾನೂನು ಜಾರಿಗೆ ಬಂದರೆ ಶರೀಅತ್‌ಗೆ ಯಾವುದೇ ಕೇಡು ಸಂಭವಿಸುವುದಿಲ್ಲ ಎಂದು ಅವರು ವಾದಿಸುತ್ತಾರೆ, ಶರೀಅತ್ ಕಾನೂನನ್ನು ಪೂರ್ಣ ರದ್ದುಗೊಳಿಸಿ ಸಮಾನ ಸಿವಿಲ್ ಕೋಡ್ ಜಾರಿಗೆ ತಂದರೂ ಅವರ ಮಟ್ಟಿಗೆ ಏನೂ ತೊಂದರೆ ಇಲ್ಲ! ಈ ಮಂದಿ 'ಶರೀಅತ್'ನ ಕಾರ್ಯವ್ಯಾಪ್ತಿಯನ್ನಾಗಲೀ ಸಮಾನ ಸಿವಿಲ್ ಕೋಡ್‌ನ ಕಾರ್ಯ ವ್ಯಾಪ್ತಿಯನ್ನಾಗಲೀ ತಿಳಿದೇ ಇಲ್ಲ. 'ಶರೀಅತ್'ನ ಮಹತ್ವವನ್ನೂ ಅವರು ತಿಳಿದಿಲ್ಲ. 'ಸಮಾನ ಸಿವಿಲ್ ಕೋಡ್'ನ ಮೂಲಕ

ಅವರ ಯಾವ್ಯಾವ ತತ್ವ ಸಿದ್ಧಾಂತಗಳು ಬಲಿಯಾಗುತ್ತವೆ ಎಂಬುದೂ ಅವರಿಗೆ ಅಜ್ಞಾತ. ಆದ್ದರಿಂದ ಈಗ 'ಶರೀಅತ್'ನ ಮಹತ್ವವನ್ನು ಸ್ಪಷ್ಟ ಪಡಿಸಬೇಕಾಗಿದೆ. 'ಸಮಾನ ಸಿವಿಲ್ ಕೋಡ್'ನ ಪ್ರತಿಪಾದಕರು ಮುಂದಿಡುವ ವಾದಗಳನ್ನು ವಿಶ್ಲೇಷಿಸಬೇಕಾಗಿದೆ. ಸಮಾನ ಸಿವಿಲ್ ಕೋಡ್ ಜಾರಿಗೆ ಬಂದರೆ ಅದರ ರೂಪುರೇಷೆಗಳೇನಾಗಿರಬಹುದು ಅವು ಮುಸ್ಲಿಮರಿಗೆ ಎಂತಹ ಸಮಸ್ಯೆಗಳನ್ನು ತಂದೊಡ್ಡಬಹುದೆಂಬುದನ್ನು ಸ್ಪಷ್ಟ ಪಡಿಸಬೇಕಾಗಿದೆ. ಈ ಪುಸ್ತಕವೂ ಅಂತಹುದೇ ಒಂದು ಪ್ರಯತ್ನ. ಮುಸ್ಲಿಮರ ಕಳವಳ ಮತ್ತು ಅತೃಪ್ತಿ ಅಕಾರಣವಲ್ಲವೆಂಬುದು ಇದರ ಅಧ್ಯಯನದಿಂದ ವ್ಯಕ್ತವಾದೀತು.

- ಶಾಂತಿ ಪ್ರಕಾಶನ

'ಮುಸ್ಲಿಮ್ ಪರ್ಸನಲ್ ಲಾ' ಅಂದರೇನು?

ಭಾರತದಲ್ಲಿ ಮುಸ್ಲಿಮ್ 'ವ್ಯಕ್ತಿ ನಿಯಮ'(ಪರ್ಸನಲ್ ಲಾ)ದ ಚರಿತ್ರೆ ಬಹಳ ಹಿಂದಿ ನಿಂದಲೇ ಆರಂಭಗೊಳ್ಳುತ್ತದೆ. ಮೊಗಲ್ ದೊರೆಗಳು ಈ ದೇಶವನ್ನು ಆಳುತ್ತಿದ್ದಾಗ ಇಲ್ಲಿ ಜಾರಿಯಲ್ಲಿದ್ದ ನಿಯಮ(Law of the Land) ಇಸ್ಲಾಮೀ ನಿಯಮವೇ ಆಗಿತ್ತು. ಅಂದರೆ ಕೇವಲ ಪೌರ ಸಂಹಿತೆ(Civil Law) ಮಾತ್ರವಲ್ಲ, ದಂಡ ಸಂಹಿತೆ(Criminal Law)ಯಲ್ಲೂ ಇಸ್ಲಾಮೀ ಕಾನೂನುಗಳೇ ಇದ್ದುವು. ನ್ಯಾಯಾಂಗ ವ್ಯವಸ್ಥೆಯು ಸಂಪೂರ್ಣವಾಗಿ ಇದೇ ಕಾನೂನುಗಳ ಪ್ರಕಾರ ನಡೆಯುತ್ತಿತ್ತು. ಆದರೂ ಆಗ ದೇಶದ ಮುಸ್ಲಿಮೇತರರಿಗೆ ವಿವಾಹ, ಪಿತ್ರಾರ್ಜಿತ ಆಸ್ತಿ ಹಂಚಿಕೆ ಇತ್ಯಾದಿ ವಿಷಯಗಳಲ್ಲಿ ತಮ್ಮ ತಮ್ಮ ಧಾರ್ಮಿಕ ಹಾಗೂ ಸಾಂಪ್ರದಾಯಿಕ ನಿಯಮ ಗಳನ್ನು ಅನುಸರಿಸುವ ಮುಕ್ತ ಸ್ವಾತಂತ್ರ್ಯ ನೀಡಲಾಗಿತ್ತು. ಒಟ್ಟಿನಲ್ಲಿ ಮುಸ್ಲಿಮರಿಗೆ ಮತ್ತು ಮುಸ್ಲಿಮೇತರರಿಗೆ ಪ್ರತ್ಯೇಕ ವ್ಯಕ್ತಿ ನಿಯಮಗಳು ಇದ್ದುವು. ಕ್ರಿ.ಶ.1765ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ದೇಶದ ನ್ಯಾಯಾಂಗವನ್ನು ಪುನರ್ರೂಪಿಸಿದಾಗಲೂ ಬ್ರಿಟಿಷ್ ನ್ಯಾಯಾಧೀಶರು ಮತ್ತು ಕಾನೂನು ತಜ್ಞರ ನೆರವಿನಿಂದ ಇಸ್ಲಾಮೀ ಕಾನೂನುಗಳ ಪ್ರಕಾರವೇ ತೀರ್ಪುಗಳನ್ನು ನೀಡುತ್ತಿದ್ದರು. ಅನಂತರ ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೆ ತರಲಾಯಿತು. ಕೊನೆಗೆ ಕ್ರಿ.ಶ.1862ರಲ್ಲಿ ಇಸ್ಲಾಮೀ ದಂಡ ಸಂಹಿತೆ(Criminal Law)ಯನ್ನೂ ಕೊನೆಗೊಳಿಸಿ ಇಂಡಿಯನ್ ಪೀನಲ್ ಕೋಡ್(Indian Penal Code) ಅನ್ನು ಜಾರಿಗೊಳಿಸಲಾಯಿತು. ಆ ಬಳಿಕ ಈ ವರೆಗೂ ಅದುವೆ ಅಸ್ತಿತ್ವದಲ್ಲಿದೆ. ಆದರೆ ಇದನ್ನು ಜಾರಿಗೊಳಿಸಿದ ಬಳಿಕವೂ ನಿಕಾಹ್, ತಲಾಕ್, ಪಿತ್ರಾರ್ಜಿತ ಆಸ್ತಿ ಹಂಚಿಕೆ ಇತ್ಯಾದಿ ಕೌಟುಂಬಿಕ ಹಾಗೂ ವೈಯಕ್ತಿಕ ವಿಷಯಗಳಲ್ಲಿ ಇಸ್ಲಾಮೀ ನಿಯಮಗಳನ್ನೇ ಮುಂದುವರಿಸಲಾಯಿತು. (ನೋಡಿರಿ: Chamber's Encyclopedia Vol. IX ಪುಟ 468) ಆದರೆ ಇಸ್ಲಾಮೇತರ ಸಂಸ್ಕೃತಿಯ ಪ್ರಭಾವಕ್ಕೊಳಗಾದ ಕೆಲವು ಮುಸ್ಲಿಮ್ ವಲಯಗಳಲ್ಲಿ ಸಾಂಪ್ರದಾಯಿಕ ನಿಯಮಗಳು ಇಸ್ಲಾಮೀ ನಿಯಮಗಳ ಸ್ಥಾನವನ್ನಾಕ್ರಮಿಸಿಕೊಂಡಿದ್ದುವು. ಉದಾ: ಹಿಂದೂ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ಕೆಲವರು ತಮ್ಮ ಮಹಿಳೆಯರಿಗೆ ಪಿತ್ರಾರ್ಜಿತ ಸೊತ್ತಿನಲ್ಲಿ ಪಾಲು ಕೊಡುತ್ತಿರಲಿಲ್ಲ. ಆದ್ದರಿಂದ ಮುಸ್ಲಿಮ್ ವಿದ್ವಾಂಸರು ಮತ್ತು ಜನಸಾಮಾನ್ಯರ ಬೇಡಿಕೆಯನ್ನು ಮನ್ನಿಸಿ ಬ್ರಿಟಿಷರು 1937ರಲ್ಲಿ ಮುಸ್ಲಿಮ್ ವ್ಯಕ್ತಿ ನಿಯಮ(Muslim Personal Law [Shariat] Application Act, 1937)ವನ್ನು ಜಾರಿಗೊಳಿಸಿದರು. ಕ್ರಿ.ಶ. 1937ರ ಶರೀಅತ್ ಆಕ್ಟ್ ಎಂದು ಕರೆಯಲ್ಪಡುವ

'ಮುಸ್ಲಿಮ್ ಪರ್ಸನಲ್ ಲಾ'ದಲ್ಲಿ ಮುಸ್ಲಿಮ್ ಅರ್ಜಿದಾರರಿಗೆ ಸಂಬಂಧಿಸಿದ ವಿವಾಹ, ಮಹ್ರ್, ಜೀವನಾಂಶ, ತಲಾಕ್(ವಿಚ್ಛೇದನ), ಖುಲಾ(ಕಾನೂನು ಪ್ರಕಾರ ಪ್ರತ್ಯೇಕಿಸುವುದು), ವಿಲಾಯತ್(ಪೋಷಕ ಹಕ್ಕು), ವಿರಾಸತ್(ಪಿತ್ರಾರ್ಜಿತ ಆಸ್ತಿ ವಿವರಣೆ), ಹಿಬ(ಉಂಬಳಿ) ಮತ್ತು ವಕ್ಫ್(ದತ್ತಿ ಸೊತ್ತು)ಗಳ ವಿಷಯದಲ್ಲಿ ನಿರ್ಣಾಯಕ ಕಾನೂನು(Rule of Decision) ಮುಸ್ಲಿಮ್ ವ್ಯಕ್ತಿ ನಿಯಮ(ಶರೀಅತ್)ವೇ ಆಗಿರುವುದು ಎಂದು ಸ್ಪಷ್ಟಪಡಿಸಲಾಗಿದೆ.

ಆ ಬಳಿಕ 1939ರಲ್ಲಿ ಮುಸ್ಲಿಮ್ ವಿವಾಹಗಳನ್ನು ಅನೂರ್ಜಿತಗೊಳಿಸಲಿಕ್ಕಿರುವ ನಿಯಮ(Dissolution of Muslim Marriages Act, 1939)ವು ಜಾರಿಗೊಂಡಿತು. ಓರ್ವ ಮುಸ್ಲಿಮ್ ಮಹಿಳೆ ಯಾವ್ಯಾವ ಕಾರಣಗಳ ಆಧಾರ(Grounds)ದಲ್ಲಿ ತನ್ನ ಪತಿಯಿಂದ ಬಿಡುಗಡೆ ಪಡೆಯಲು ನ್ಯಾಯಾಲಯದ ಮೊರೆ ಹೋಗಬಹುದು ಎಂಬುದನ್ನು ಇದರಲ್ಲಿ ವಿವರಿಸಲಾಗಿದೆ. ಉದಾ: ಪತಿಯು ನಾಲ್ಕು ವರ್ಷಗಳ ವರೆಗೆ ನಾಪತ್ತೆಯಾಗಿರುವುದು, 2 ವರ್ಷಗಳಿಂದ ಜೀವನ ವೆಚ್ಚಗಳನ್ನು ಪೂರೈಸದಿರುವುದು, ಹಿಂಸಿಸುವುದು, ಒಂದಕ್ಕಿಂತ ಹೆಚ್ಚು ಪತ್ನಿಯರಿದ್ದಲ್ಲಿ ಅವರ ಮಧ್ಯೆ ಕುರ್‌ಆನ್ ಆದೇಶದ ಪ್ರಕಾರ ನ್ಯಾಯಪಾಲನೆ ಮಾಡದಿರುವುದು ಅಥವಾ ಮಾರಕ ಗುಪ್ತವ್ಯಾಧಿ(Veneral diseases)ಗಳಿಗೆ ಬಲಿಯಾಗಿರುವುದು. ಈ ಕಾರಣಗಳ ಆಧಾರದಲ್ಲಿ ಮಹಿಳೆಯು ನ್ಯಾಯಾಲಯದಿಂದ ತನ್ನ ವಿವಾಹ ವಿಚ್ಛೇಧನದ ಅನುಮತಿ(Decree) ಪಡೆಯಬಹುದು.

ಮುಸ್ಲಿಮ್ ವ್ಯಕ್ತಿ ನಿಯಮವು ವಿವಾಹ, ವಿಚ್ಛೇದನ, ಖುಲಾ, ವಿರಾಸತ್ ಇತ್ಯಾದಿ ಶರೀಅತ್(ಇಸ್ಲಾಮೀ ಧರ್ಮ ಸಂಹಿತೆ) ನಿಯಮಗಳಿಗೆ ಸಂಬಂಧಿಸಿದ್ದು ಅದರ ವ್ಯಾಪ್ತಿಯು ಕೇವಲ ನಿಕಾಹ್ ಮತ್ತು ತಲಾಕ್‌ಗಳಿಗೆ ಸೀಮಿತವಾಗಿದೆ. ಸಂಪೂರ್ಣ ವಾರೀಸು ಕಾಯಿದೆಯನ್ನು ಅದು ಒಳಗೊಂಡಿದೆ ಎಂಬುದು ಇದರಿಂದ ತಿಳಿದು ಬರುತ್ತದೆ. ಈ ಯಾವುದೇ ವಿಷಯಕ್ಕೆ ಸಂಬಂಧಿಸಿದ ವಿವಾದಗಳನ್ನು ಶರೀಅತ್‌ನ ಆಧಾರದಲ್ಲೇ ಇತ್ಯರ್ಥಗೊಳಿಸಲು ನ್ಯಾಯಾಲಯವು ನಿರ್ಬಂಧಿತವಾಗಿದೆ. ಉದಾ: ಒಬ್ಬ ಮಹಿಳೆಯು ತನ್ನ ಪತಿಯ ದೌರ್ಜನ್ಯಗಳಿಂದ ಜಿಗುಪ್ಸೆಗೊಂಡಿದ್ದಾಳೆ. ಆದರೆ ಅವಳನ್ನು ತನ್ನ ವಿವಾಹ ಬಂಧನದಿಂದ ಮುಕ್ತಗೊಳಿಸಲು(ಖುಲಾ ಕೊಡಲು) ಪತಿ ಸಿದ್ಧನಿಲ್ಲ. ಆಗ ಪತ್ನಿಯು ನ್ಯಾಯಾಲಯದಲ್ಲಿ 'ಇಸ್ಲಾಮೀ ನಿಯಮ' ಪ್ರಕಾರ ಆತನಿಂದ ಬಿಡುಗಡೆ ಪಡೆಯಬಹುದು ಅಥವಾ ಒಬ್ಬ ಮಹಿಳೆಗೆ ಇಸ್ಲಾಮಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಆಸ್ತಿ ಹಕ್ಕನ್ನು ನೀಡಲು ಅವಳ ಸಂಬಂಧಿಕರು ನಿರಾಕರಿಸಿದಲ್ಲಿ ಆಕೆ ನ್ಯಾಯಾಲಯದ ಮೂಲಕ ತನ್ನ ಹಕ್ಕನ್ನು ಪಡೆಯಬಹುದು.

ಮುಸ್ಲಿಮ್ ವ್ಯಕ್ತಿ ನಿಯಮವನ್ನು ಕ್ರೋಡೀಕರಣ ಮಾಡಿಲ್ಲವಾದರೂ ತಾತ್ವಿಕವಾಗಿ ಶರೀಅತ್ತನ್ನು ತೀರ್ಪಿನ ಮಾನದಂಡವಾಗಿ ಅಂಗೀಕರಿಸಲಾಗಿದೆ. ಆದ್ದರಿಂದ ಇಸ್ಲಾಮೀ ಫಿಕ್ಹ್ (ಕರ್ಮಶಾಸ್ತ್ರ)ಗೂ ಕಾನೂನಿನದೇ ಸ್ಥಾನಮಾನವಿದೆ. ಅಲ್ಲದೆ ನ್ಯಾಯಾಲಯದ ಅನುಕೂಲಕ್ಕಾಗಿ ಆಂಗ್ಲ ಭಾಷೆಯಲ್ಲಿ 'ಮುಹಮಡನ್ ಲಾ' ಕುರಿತು ಅನೇಕ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಈ

ಪೈಕಿ ಮುಲ್ಲಾ ಅವರ Principles of Mohammedan Law ಮತ್ತು ಎ.ಎ. ಫೈಝಿ ಅವರ Outlines of Mohammedan Law ಬಹಳ ಪ್ರಸಿದ್ಧವಾಗಿದೆ. ಹನಫೀ ಕರ್ಮಶಾಸ್ತ್ರದ ಪ್ರಖ್ಯಾತ ಹಾಗೂ ಅಧಿಕೃತ ಗ್ರಂಥವಾದ 'ಹಿದಾಯ'ವನ್ನು ಆಂಗ್ಲ ಭಾಷೆಗೆ ಅನುವಾದಿಸಿ ಪ್ರಕಟಿಸಲಾಗಿದೆ. ನ್ಯಾಯವಾದಿಗಳು ನ್ಯಾಯಾಲಯದಲ್ಲಿ ಇದೇ ಗ್ರಂಥವನ್ನು ಉದ್ಧರಿಸಿ ವಾದಿಸುತ್ತಾರೆ. ಹೀಗೆ ನ್ಯಾಯಾಲಯಗಳು ಇಸ್ಲಾಮೀ ಕಾನೂನುಗಳ ಪ್ರಕಾರವೇ ತೀರ್ಪುಗಳನ್ನು ನೀಡ ಬೇಕಾಗುತ್ತದೆ. ಈ ಸ್ವರೂಪವು ಸ್ವಾತಂತ್ರ್ಯದ ಬಳಿಕವೂ ಮುಂದುವರಿಯಿತು. ದೇವಾನುಗ್ರಹದಿಂದ ಈಗಲೂ ಅದೇ ಮುಂದುವರಿಯುತ್ತದೆ. ಆದರೆ ಆಂಶಿಕ ವಿಷಯಗಳಲ್ಲಿ ಮತ್ತು ವಿವರಣೆಗಳಲ್ಲಿ ಇಸ್ಲಾಮೀ ಕಾನೂನುಗಳ ಮೂಲ ಇಂಗಿತವನ್ನು ಪ್ರಸಕ್ತ ನ್ಯಾಯಾಲಯಗಳು ಪೂರ್ತಿಯಾಗಿ ಈಡೇರಿಸುತ್ತಿಲ್ಲ ಎಂಬುದು ಬೇರೆ ವಿಷಯ. ಏನಿದ್ದರೂ ಪ್ರಚಲಿತ ವ್ಯವಸ್ಥೆ ಮತ್ತು ಪರಿಸ್ಥಿತಿಗಳಲ್ಲಿ ನಾವು ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವಂತಿಲ್ಲ.

'ಮುಸ್ಲಿಮ್ ಪರ್ಸನಲ್ ಲಾ'ದ ಮಹತ್ವ

ನಿಕಾಹ್, ತಲಾಕ್, ಖುಲಾ, ವಿರಾಸತ್ ಇತ್ಯಾದಿ ವಿಷಯಗಳಲ್ಲಿ ಜನರು ತಾವಿಚ್ಛಿಸುವ ನಿಲುವುಗಳು ಮತ್ತು ವಿಧಾನಗಳನ್ನು ಅನುಸರಿಸಲು ಇಸ್ಲಾಮ್ ಅನುಮತಿಸುವುದಿಲ್ಲ. ಈ ಎಲ್ಲ ವಿಷಯಗಳಲ್ಲಿ ಪವಿತ್ರ ಕುರ್‌ಆನಿನಲ್ಲಿ ಸವಿಸ್ತಾರವಾದ ಆದೇಶ ನಿರ್ದೇಶನಗಳನ್ನು ಕೊಡಲಾಗಿದೆ. ಹಾಗೂ ಈ ಪೈಕಿ ಪ್ರತಿಯೊಂದು ಆದೇಶದ ಜೊತೆಗೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಅಪ್ಪಣೆಯೂ ಇದೆ. ಈ ಆದೇಶಗಳ ಉಲ್ಲಂಘನೆಯು ಘೋರ ಶಿಕ್ಷೆಗೆ ಮೂಲವಾಗುವುದೆಂಬ ಎಚ್ಚರಿಕೆಯನ್ನೂ ನೀಡಲಾಗಿದೆ. ಉದಾಹರಣೆಗೆ ಪವಿತ್ರ ಕುರ್‌ಆನಿನಲ್ಲಿ ನಿಕಾಹ್‌ನ ಆದೇಶಗಳನ್ನು ನೀಡಿದ ಬಳಿಕ ಹೀಗೆ ಹೇಳಿದೆ:

'...ಇದು ನಿಮ್ಮ ಮೇಲೆ ಅಲ್ಲಾಹನು ನಿರ್ಬಂಧಗೊಳಿಸಿರುವ ಕಾನೂನು...'

(ಪವಿತ್ರ ಕುರ್‌ಆನ್, 4: 24)

ತಲಾಖ್(ವಿಚ್ಛೇದನ) ಮತ್ತು ಖುಲಾ(ಸ್ತ್ರೀಯ ಕಡೆಯಿಂದಾಗುವ ವಿಚ್ಛೇದನ) ಆದೇಶಗಳನ್ನು ನೀಡಿದ ಬಳಿಕ ಹೀಗೆ ಹೇಳಲಾಗಿದೆ:

''...ಅಲ್ಲಾಹನಿಂದ ನಿಶ್ಚಯಿಸಲ್ಪಟ್ಟ ಮೇರೆಗಳಿವು. ಇವುಗಳನ್ನು ಉಲ್ಲಂಘಿಸಬೇಡಿರಿ. ಅಲ್ಲಾಹನ ಮೇರೆಗಳನ್ನು ಯಾರಾದರೂ ಮೀರಿದರೆ ಅವರೇ ಅಕ್ರಮಿಗಳು.''

(ಪವಿತ್ರ ಕುರ್‌ಆನ್, 2: 229)

ವಿರಾಸತ್(ಆಸ್ತಿ ಹಂಚಿಕೆ) ಕುರಿತು ವಿವರಿಸಿದ ಬಳಿಕ ಕುರ್‌ಆನ್ ಹೀಗೆ ಹೇಳುತ್ತದೆ:

'...ಅಲ್ಲಾಹನು ನಿಶ್ಚಯಿಸಿದ ಪಾಲುಗಳಿವು....' (ಪವಿತ್ರ ಕುರ್‌ಆನ್, 4: 11)

ಆಸ್ತಿ ಹಂಚಿಕೆಯ ವ್ಯವಸ್ಥೆಯನ್ನು ವಿವರಿಸುವ ಪಾಠವು ಪವಿತ್ರ ಕುರ್‌ಆನಿನ ಈ ಸೂಕ್ತಗಳೊಂದಿಗೆ ಪೂರ್ಣಗೊಳ್ಳುತ್ತದೆ:

"ಅಲ್ಲಾಹನ ಮತ್ತು ಆತನ ಪ್ರವಾದಿಗಳ ಆಜ್ಞೋಲ್ಲಂಘನೆ ಮಾಡುವವನನ್ನು ಹಾಗೂ ಅವನ ನಿಶ್ಚಿತ(ಮೇರೆ) ಗಡಿಗಳನ್ನು ಮೀರುವವರನ್ನು ಅಲ್ಲಾಹನು ನರಕಾಗ್ನಿಗೆ ತಳ್ಳುವನು. ಅಲ್ಲಿ ಆತನು ಸದಾ ಕಾಲ ಇರುವನು. ಅಲ್ಲಿ ಆತನಿಗೆ ಅಪಮಾನಕಾರಿ ಶಿಕ್ಷೆ ಸಿಗುವುದು."

(ಪವಿತ್ರ ಕುರ್‌ಆನ್, 4: 14)

ಪವಿತ್ರ ಕುರ್‌ಆನಿನ ಕೌಟುಂಬಿಕ ಆದೇಶಗಳನ್ನೆಲ್ಲಾ ಪ್ರವಾದಿ ಮುಹಮ್ಮದ್‌ರವರು(ಸ) ವಿಶ್ಲೇಷಿಸಿದ್ದು, ಅದನ್ನು ಸುನ್ನತ್ ಎನ್ನುತ್ತಾರೆ. ಮುಸ್ಲಿಮ್ ವಿದ್ವಾಂಸವರೇಣ್ಯರು ಪವಿತ್ರ ಕುರ್‌ಆನ್ ಮತ್ತು ಸುನ್ನತ್ತಿನ ಆಧಾರದಲ್ಲಿ ಇಜ್ತಿಹಾದ್(ಸಂಶೋಧನೆ)ಗಳನ್ನು ನಡೆಸಿ ಇಸ್ಲಾಮೀ ಫಿಕ್ಹ್ (ಕರ್ಮಶಾಸ್ತ್ರ) ರೂಪಿಸಿದರು. ಕೌಟುಂಬಿಕ ಹಾಗೂ ಆಂತರಿಕ ಗೃಹ ಜೀವನಕ್ಕೆ ಸಂಬಂಧಿಸಿದ ಪವಿತ್ರ ಕುರ್‌ಆನ್ ಮತ್ತು ಸುನ್ನತಿನ ಆದೇಶಗಳು ಇಸ್ಲಾಮೀ ಶರೀಅತ್(ಧರ್ಮಸಂಹಿತೆ)ನ ಅತ್ಯಂತ ಮಹತ್ವಪೂರ್ಣ ಹಾಗೂ ಅನಿವಾರ್ಯ ಅಂಗಗಳಾಗಿವೆ. ಅವುಗಳಿಗೆ ಅಲ್ಲಾಹನ ಕಾನೂನು ಮತ್ತು ಅವನ ಆದೇಶಗಳಿಗೆ ಇರುವಷ್ಟು ಗೌರವ ಹಾಗೂ ಸ್ಥಾನಮಾನ ಪ್ರಾಪ್ತವಿದೆ. ಪವಿತ್ರ ಕುರ್‌ಆನಿನಲ್ಲಿ ಶರೀಅತ್ತಿನ ಸಂಪೂರ್ಣ ಅನುಸರಣೆ ಮಾಡಬೇಕೆಂದು ಆಜ್ಞಾಪಿಸಲಾಗಿದೆ.

"ಓ ಸತ್ಯವಿಶ್ವಾಸಿಗಳೇ, ನೀವು ಸರ್ವ ಸಂಪೂರ್ಣವಾಗಿ ಇಸ್ಲಾಮಿನೊಳಗೆ ಸೇರಿಕೊಳ್ಳಿರಿ..." (ಪವಿತ್ರ ಕುರ್‌ಆನ್, 2: 208)

"ಹೇ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟಿರುವುದನ್ನೆಲ್ಲ ಅನುಸರಿಸಿರಿ ಮತ್ತು ನಿಮ್ಮ ಪಾಲಕ ಪ್ರಭುವನ್ನು ಬಿಟ್ಟು ಇತರ ಸಂರಕ್ಷಕರನ್ನು ಅನುಸರಿಸಬೇಡಿರಿ."

(ಪವಿತ್ರ ಕುರ್‌ಆನ್, 7: 3)

"ಓ ಪೈಗಂಬರರೇ, ನೀವು ಅಲ್ಲಾಹನಿಂದ ಅವತೀರ್ಣಗೊಂಡ ಕಾನೂನಿನ ಪ್ರಕಾರ ಇವರ ವ್ಯವಹಾರಗಳ ತೀರ್ಮಾನ ಮಾಡಿರಿ ಮತ್ತು ಇವರ ಅಭೀಷ್ಟಗಳನ್ನು ಅನುಸರಿಸಬೇಡಿರಿ. ಇವರು ನಿಮ್ಮನ್ನು 'ಗೊಂದಲ'ದಲ್ಲಿ ಸಿಲುಕಿಸಿ, ಅಲ್ಲಾಹನು ನಿಮ್ಮ ಮೇಲೆ ಅವತೀರ್ಣಗೊಳಿಸಿದ ಈ ಮಾರ್ಗದರ್ಶನದಿಂದ ಕಿಂಚಿತ್ತೂ ವಿಮುಖಗೊಳಿಸದಂತೆ ಬಹಳ ಜಾಗರೂಕರಾಗಿರಿ."

(ಪವಿತ್ರ ಕುರ್‌ಆನ್, 5: 49)

ಅಲ್ಲಾಹನ ಆದೇಶ ಮತ್ತು ಅವನ ಕಾನೂನುಗಳ ಎದುರು ಇನ್ನೊಂದು ಕಾನೂನನ್ನು ತನ್ನಿಚ್ಛೆಯಿಂದ ರಚಿಸಿಕೊಳ್ಳುವ ಅಥವಾ ತಾನು ಬಯಸುವ ಇತರ ಮಾರ್ಗಗಳನ್ನು ಅನುಸರಿಸುವ ಯಾವ ಅಧಿಕಾರವೂ ಒಬ್ಬ ಮುಸ್ಲಿಮನಿಗೆ ಇಲ್ಲ.

"ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಯಾವುದಾದರೊಂದು ವಿಷಯದ ತೀರ್ಮಾನ ಮಾಡಿಬಿಟ್ಟರೆ ಆ ವಿಷಯದಲ್ಲಿ ಸ್ವತಃ ತೀರ್ಮಾನ ಕೈಗೊಳ್ಳುವ ಹಕ್ಕು (ಸತ್ಯವಿಶ್ವಾಸಿಗಳಾದ) ಯಾವ ಸ್ತ್ರೀಪುರುಷರಿಗೂ ಇಲ್ಲ. ಯಾರಾದರೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದರೆ, ಅವನು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದುಬಿಟ್ಟನು." (ಪವಿತ್ರ ಕುರ್‌ಆನ್, 33: 36)

ಅಲ್ಲಾಹನ ಕಾನೂನುಗಳ ಪ್ರಕಾರ ತೀರ್ಮಾನಗಳನ್ನು ಕೈಗೊಳ್ಳುವ ಜನರನ್ನು ಕುರ್‌ಆನಿನಲ್ಲಿ ಕಾಫಿರ್(ಸತ್ಯಧಿಕ್ಕಾರಿ) ಫಾಸಿಕ್(ಧರ್ಮಭ್ರಷ್ಟ) ಮತ್ತು ಝಾಲಿಮ್(ಅಕ್ರಮಿ) ಗಳೆಂದು ಕರೆಯಲಾಗಿದೆ. ಅಲ್ಲದೆ ಧರ್ಮದ ಒಂದಂಶವನ್ನು ಸ್ವೀಕರಿಸಿ ಇನ್ನೊಂದನ್ನು ಕೈ ಬಿಡುವವರ ಬಗೆಗೂ ಪವಿತ್ರ ಕುರ್‌ಆನ್ ಉಗ್ರ ನಿಲುವು ತೋರಿದೆ.

''ನೀವೇನು ಗ್ರಂಥದ ಒಂದಂಶದ ಮೇಲೆ ವಿಶ್ವಾಸವಿಟ್ಟು ಇನ್ನೊಂದಂಶವನ್ನು ನಿಷೇಧಿಸುತ್ತೀರಾ?'' (ಪವಿತ್ರ ಕುರ್‌ಆನ್, 2: 85)

ಅನ್ನಿಸಾ ಎಂಬ ಅಧ್ಯಾಯದಲ್ಲಿ ಕೌಟುಂಬಿಕ ಕ್ಷೇತ್ರಕ್ಕೆ ಸಂಬಂಧಿಸಿದ ಆದೇಶಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ. ಇದೇ ಅಧ್ಯಾಯದಲ್ಲಿ ಪ್ರವಾದಿವರ್ಯ(ಸ)ರನ್ನುದ್ದೇಶಿಸಿ ಹೀಗೆ ಹೇಳಿದೆ:

''ಓ ಮುಹಮ್ಮದರೇ! ನಿಮ್ಮ ಪ್ರಭುವಿನಾಣೆ, ಇವರು ತಮ್ಮೊಳಗಿನ ಭಿನ್ನಾಭಿಪ್ರಾಯಗಳಲ್ಲಿ ನಿಮ್ಮನ್ನು ತೀರ್ಪು ನೀಡುವವರೆಂದು ಒಪ್ಪಿಕೊಂಡು ಆ ಬಳಿಕ ನೀವು ಕೊಟ್ಟ ತೀರ್ಪಿನ ಬಗ್ಗೆ ತಮ್ಮ ಮನಸ್ಸಿನಲ್ಲೂ ಯಾವುದೇ ಸಂಕೋಚ ಪಡದೆ ಅದನ್ನು ಸರ್ವ ಸಂಪೂರ್ಣವಾಗಿ ಒಪ್ಪಿಕೊಳ್ಳುವವರೆಗೂ ಅವರು ಖಂಡಿತ ಸತ್ಯವಿಶ್ವಾಸಿಗಳಾಗಲಾರರು.''

(ಪವಿತ್ರ ಕುರ್‌ಆನ್, 4: 65)

ಮುಸ್ಲಿಮ್ ವ್ಯಕ್ತಿ ನಿಯಮವು ಶರೀಅತ್ತಿನ ಅಂಗವೆಂಬ ಕಾರಣಕ್ಕಾಗಿ ಅದನ್ನು ರದ್ದು ಮಾಡಬಾರದೆಂದಿಲ್ಲ ಎಂದು ಮುಸ್ಲಿಮ್ ವ್ಯಕ್ತಿ ನಿಯಮದ ಕೆಲವು ವಿರೋಧಿಗಳು ವಾದಿಸುತ್ತಿದ್ದಾರೆ. ಇಸ್ಲಾಮೀ ದಂಡ ಸಂಹಿತೆ(Criminal Law) ಕೂಡಾ ಶರೀತ್ತಿನ ಅಂಗವಾಗಿದ್ದು ಅದನ್ನು ಈ ಹಿಂದೆಯೇ ರದ್ದು ಪಡಿಸಲಾಗಿದ್ದು ಆ ಜಾಗದಲ್ಲಿ ಇಸ್ಲಾಮೇತರ ದಂಡ ಸಂಹಿತೆಯನ್ನು ಜಾರಿಗೊಳಿಸಲಾಗಿದೆ ಎಂಬುದು ಅವರ ತರ್ಕ. ಆದರೆ ಈ ತರ್ಕ ವಿಚಿತ್ರವಾಗಿದೆ. ಒಬ್ಬನನ್ನು ಒಂದು ಮಲಿನ ವಾತಾವರಣದಲ್ಲಿ ಸಿಕ್ಕಿಸಿಡಲಾಗಿದ್ದರೆ ಅದರ ಅರ್ಥ ಅವನಿಗೆ ಸಿಗುತ್ತಿರುವ ಸ್ವಲ್ಪವಾದರೂ ಶುದ್ಧವಾಯುವನ್ನು ನಿಲ್ಲಿಸಿ ಬಿಡಬೇಕೆಂದೇ? ಅವನನ್ನು ಸಂಪೂರ್ಣ ಮಾಲಿನ್ಯಕ್ಕೆ ಒಳಪಡಿಸಬೇಕೆಂದೇ? ಇಸ್ಲಾಮೀ ದಂಡ ಸಂಹಿತೆಯಾಗಲೀ ಪೌರಸಂಹಿತೆಯಾಗಲೀ ಅವುಗಳಿಗೆ ತಮ್ಮದೇ ಆದ ಪ್ರತ್ಯೇಕ ಸ್ಥಾನಮಾನಗಳಿವೆ ಹಾಗೂ ಆ ಪೈಕಿ ಪ್ರತಿಯೊಂದು ಸಂಹಿತೆಯೂ ಗೌರವಾರ್ಹವಾಗಿದೆ. ಈ ಪೈಕಿ ಯಾವುದೇ ನಿಯಮವನ್ನು ಕೊನೆಗೊಳಿಸುವ ಆಲೋಚನೆ ಒಬ್ಬ ಮುಸ್ಲಿಮನಲ್ಲಿ ಉಂಟಾಗಲು ಸಾಧ್ಯವೇ ಇಲ್ಲ. ಒಂದು ವೇಳೆ ಕಾಲದ ಕ್ರೌರ್ಯವು ಇಸ್ಲಾಮೀ ದಂಡ ಸಂಹಿತೆಯನ್ನು ಕಿತ್ತುಕೊಂಡು ಅವರ ಮೇಲೆ ಪರಕೀಯ ಸಂಹಿತೆಯನ್ನು ಹೇರಿದೆಯೆಂದಾದರೆ, ಅವರ ಅಳಿದುಳಿದ ಇಸ್ಲಾಮೀ ಪೌರ ಸಂಹಿತೆಯನ್ನು ಕೊನೆಗಾಣಿಸಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಅಲ್ಲದೆ ಈ ಘಟನೆಯನ್ನು ಆಧಾರವಾಗಿಟ್ಟು ಈಗ 'ಪರ್ಸನಲ್ ಲಾ'ವನ್ನು ಕೊನೆಗಾಣಿಸಬಯಸುವವರು ನಿಜವಾಗಿ ಪೌರ ಸಂಹಿತೆ ಮತ್ತು ದಂಡ ಸಂಹಿತೆಯ ಮಧ್ಯೆ ಇರುವ ವ್ಯತ್ಯಾಸವನ್ನು ಸಂಪೂರ್ಣವಾಗಿ

ನಿರ್ಲಕ್ಷಿಸಿದ್ದಾರೆ. ವಾಸ್ತವದಲ್ಲಿ ದಂಡ ಸಂಹಿತೆಯು ನೇರವಾಗಿ ಆಯಾ ರಾಷ್ಟ್ರದ ಸರಕಾರಕ್ಕೆ ಸಂಬಂಧಿಸಿರುತ್ತದೆ. ಉದಾ: ಕಳ್ಳ ಅಥವಾ ವ್ಯಭಿಚಾರಿಗೆ ಸರಕಾರ ಮಾತ್ರ ಶಿಕ್ಷೆ ವಿಧಿಸಬಲ್ಲುದೇ ವಿನಾ ಜನರು ನೀಡುವಂತಿಲ್ಲ. ಆದರೆ ಸಾಮಾಜಿಕ ನಿಯಮಗಳು ಹಾಗಲ್ಲ. ಅವುಗಳನ್ನು ಜನರು ಸ್ವಯಂ ಪಾಲಿಸಬೇಕಾಗುತ್ತದೆ. ಸರಕಾರಕ್ಕೆ ಅವುಗಳ ಜತೆ ಇರುವ ಸಂಬಂಧದ ಸ್ವರೂಪ ಕೇವಲ ದ್ವಿತೀಯ ದರ್ಜೆಯದಾಗಿ ಮಾತ್ರ ಇರುತ್ತದೆ. ಉದಾ: ವಿವಾದಗಳ ತೀರ್ಮಾನ ಇತ್ಯಾದಿ ವಿಷಯಗಳಲ್ಲಿ ಇನ್ನು ಇಸ್ಲಾಮೀ ಸಾಮಾಜಿಕ ನಿಯಮಗಳನ್ನು ಅನೂರ್ಜಿತಗೊಳಿಸುವುದರಿಂದ ವ್ಯಕ್ತಿಗಳ ನೈತಿಕ ಮಟ್ಟವೂ ಕುಸಿಯುವ ಸಾಧ್ಯತೆ ಇದೆ. ಉದಾ: ಸರಕಾರವು ಕಾನೂನು ಮೂಲಕ 'ತಲಾಕ್'ಅನ್ನು ನಿಷೇಧಿಸಿತೆಂದು ಭಾವಿಸೋಣ. ಆಗ ಒಬ್ಬ ವ್ಯಕ್ತಿಗೆ ತನ್ನ ಪತ್ನಿಯನ್ನು ವಿಚ್ಛೇದಿಸಲೇಬೇಕೆಂಬ ಪರಿಸ್ಥಿತಿ ಎದುರಾಯಿತು. ಆದರೆ ಕಾನೂನಿನ ದೃಷ್ಟಿಯಲ್ಲಿ ಅವರಿನ್ನೂ ಪತಿ ಪತ್ನಿಯರೇ ಆಗಿರುತ್ತಾರೆ. ಇಂಥ ಸ್ಥಿತಿಯಲ್ಲಿ ಅವರಿಬ್ಬರ ನೈತಿಕ ಸ್ವರೂಪವು ಖಂಡಿತ ಪ್ರಭಾವಿತವಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ ದಂಡ ಸಂಹಿತೆಯು ಕೇವಲ ಅಪರಾಧಿಗಳನ್ನು ದಂಡಿಸುವುದಕ್ಕೆ ಸಂಬಂಧಿಸಿದೆ. ಆದ್ದರಿಂದ ಮುಸ್ಲಿಮ್ ವ್ಯಕ್ತಿ ನಿಯಮವನ್ನು ಕಿತ್ತು ಹಾಕುವುದಕ್ಕೆ ಇಸ್ಲಾಮೀ ದಂಡ ಸಂಹಿತೆಯನ್ನು ಅನೂರ್ಜಿತಗೊಳಿಸಲಾಗಿದೆ ಎಂಬುದನ್ನು ಆಧಾರವಾಗಿಡಲು ಸಾಧ್ಯವಿಲ್ಲ.

ಸಂವಿಧಾನದ 44ನೇ ವಿಧಿ

ಮುಸ್ಲಿಮ್ ಪರ್ಸನಲ್ ಲಾ ದ ವಿರುದ್ಧ ದೇಶದಲ್ಲಿ ನಡೆಯುತ್ತಿರುವ ಚಳುವಳಿಯ ನಿಜವಾದ ಉದ್ದೇಶ ಅದನ್ನು ಸಂಪೂರ್ಣ ನಾಶ ಮಾಡಿ ಅದರ ಸ್ಥಾನದಲ್ಲಿ ಎಲ್ಲ ವರ್ಗಗಳಿಗೂ ಅನ್ವಯವಾಗುವ ಮುಸ್ಲಿಮ್ ಮತ್ತು ಮುಸ್ಲಿಮೇತರ ಎಂಬ ವ್ಯತ್ಯಾಸ ಕಾಣದ ಹಾಗೂ ಇಸ್ಲಾಮ್ ಅಥವಾ ಇನ್ನಾವುದೇ ಧರ್ಮದ ಆಂತರಿಕ ನಿಯಮಗಳಿಗೆ ಕಿಂಚಿತ್ತೂ ಪ್ರವೇಶ ಕೊಡದ ಒಂದು ನಿಯಮವನ್ನು ಹೇರುವುದೇ ಆಗಿದೆ. ನಿಜವಾಗಿ ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಜೀವನದ ಭೌತಿಕವಾದೀ ದೃಷ್ಟಿಕೋನವೇ ಈ ಚಳವಳಿಯ ತಳಹದಿಯಾಗಿದೆ. ಆದರೆ ಭಾರತೀಯ ಸಂವಿಧಾನದ ಮಾರ್ಗದರ್ಶಕ ತತ್ವಗಳಲ್ಲೊಂದಾದ 44ನೇ ವಿಧಿಯು ಈ ಮನೋಭಾವಕ್ಕೆ ಇಂಬು ಕೊಡುತ್ತಿದೆ. ಆದರಲ್ಲಿ ಹೀಗೆ ಹೇಳಿದೆ:

'The state shall endeavour to secure for citizens, a uniform civil code throughout the territory of India'

'ಇಡೀ ದೇಶದ ಪೌರರಿಗೆ ಒಂದು ಸಮಾನ ಪೌರ ಸಂಹಿತೆ ಇರುವಂತೆ ರಾಷ್ಟ್ರವು ಪ್ರಯತ್ನಿಸುವುದು'

ಆದರೆ ಸಂವಿಧಾನದ ಈ ವಿಧಿಯು ಇತರ ತತ್ವಗಳಂತೆ ಕೇವಲ ಒಂದು ಮಾರ್ಗದರ್ಶಕ ತತ್ವದ ಸ್ವರೂಪವನ್ನು ಮಾತ್ರ ಹೊಂದಿದೆ. ಅತ್ತ ಸಂವಿಧಾನದ ಮೂಲಭೂತ ಹಕ್ಕುಗಳಿಗೆ ಈ ತತ್ವಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಇದೆ. ಆದರಲ್ಲಿ ಹೀಗೆ ಹೇಳಲಾಗಿದೆ:

ಎಲ್ಲ ಜನರಿಗೆ ಸಮಾನ ರೀತಿಯಲ್ಲಿ ಇಚ್ಛಾ ಸ್ವಾತಂತ್ರ್ಯವಿರುವುದು. ಪ್ರತಿಯೊಬ್ಬರಿಗೂ ತಮ್ಮ ಇಚ್ಛೆಯ ಧರ್ಮವನ್ನು ಮುಕ್ತವಾಗಿ ಸ್ವೀಕರಿಸುವ, ಅದನ್ನು ಅನುಸರಿಸುವ ಮತ್ತು ಅದನ್ನು ಪ್ರಚಾರ ಮಾಡುವ ಅಧಿಕಾರವಿದೆ.

ಧಾರ್ಮಿಕ ಸ್ವಾತಂತ್ರ್ಯದ ಈ ವಿಧಿಯ ಪ್ರಕಾರ, ಯಾವುದೇ ಧಾರ್ಮಿಕ ವರ್ಗದ ಧಾರ್ಮಿಕ ಸ್ವಾತಂತ್ರ್ಯವನ್ನು ಘಾಸಿಗೊಳಿಸುವ ಅಥವಾ ಅವರನ್ನು ಅವರ ಧಾರ್ಮಿಕ ವಿಧಿಗಳಿಗೆ ವ್ಯತಿರಿಕ್ತವಾದ ವಿಧಿಗಳ ಪಾಲನೆಗೆ ನಿರ್ಬಂಧಿಸುವಂತಹ ಯಾವುದೇ ಪೌರ ನಿಯಮಕ್ಕೆ ಆಸ್ಪದವೇ ಇಲ್ಲ. ಸಮಾನ ನಿಯಮದ ಹೇರಿಕೆಯು ಧರ್ಮದಲ್ಲಿ ಸ್ಪಷ್ಟ ಹಸ್ತಕ್ಷೇಪವಾಗಿದೆ. ಇದರಿಂದ ಜನರಿಗೆ ತಮ್ಮಿಚ್ಛೆಯ ಧರ್ಮವನ್ನು ಪಾಲಿಸುವ ಸ್ವಾತಂತ್ರ್ಯವನ್ನು ಘೋಷಿಸಿದ ನಮ್ಮ ಸಂವಿಧಾನದ ಈ ಮೂಲಭೂತ ಹಕ್ಕುಗಳ ವಿಧಿಯು ಸಂಪೂರ್ಣ ಅರ್ಥಹೀನವಾಗುತ್ತದೆ. ಇಷ್ಟಿದ್ದರೂ ಕೆಲವರು ಸಂವಿಧಾನದ ಈ ಮೂಲಭೂತ ವಿಧಿಯನ್ನು ಕಡೆಗಣಿಸಿ, 44ನೇ ವಿಧಿಯೇ ಸರ್ವಸ್ವವೆಂದು ಪರಿಗಣಿಸುತ್ತಿದ್ದಾರೆ.

ಮಾರ್ಗದರ್ಶಕ ತತ್ವಗಳಿಗೆ (Directive Principles) ಸಂಬಂಧಿಸಿ ಹೇಳುವುದಾದರೆ ಪಾನನಿಷೇಧ ಕೂಡಾ ಈ ತತ್ವಗಳಲ್ಲಿ ಸೇರಿದೆ. ದೇಶದ ಯಾವ ಧರ್ಮವೂ ಪಾನನಿಷೇಧಕ್ಕೆ ವಿರೋಧಿಯಾಗಿಲ್ಲ. ಇಷ್ಟಿದ್ದೂ ದೇಶದ ಬಹುತೇಕ ರಾಜ್ಯಗಳಲ್ಲಿ ಪಾನನಿಷೇಧ ಜಾರಿಯಲ್ಲಿಲ್ಲ. ಅದನ್ನು ಜಾರಿಗೊಳಿಸಿದ ರಾಜ್ಯಗಳೂ ಕ್ರಮೇಣ ತಮ್ಮ ನೀತಿ ಬದಲಾಯಿಸುತ್ತಿವೆ. ಕೇರಳವಂತೂ ಈಗಾಗಲೇ ಪಾನನಿಷೇಧ ಕಾನೂನನ್ನು ಹಿಂತೆಗೆದುಕೊಂಡಿದೆ. ಮಹಾರಾಷ್ಟ್ರದಲ್ಲಿ ಪಾನನಿಷೇಧಕ್ಕೆ ಸಂಬಂಧಿಸಿದ ನಿಯಮಗಳನ್ನು ಬಹಳ ಸಡಿಲುಗೊಳಿಸಲಾಗಿದೆ. ಈಗಂತೂ ಸರಕಾರ ಪೂರ್ತಿಯಾಗಿಯೇ ಈ ನಿಯಮಗಳನ್ನು ರದ್ದುಗೊಳಿಸುವ ಸನ್ನಾಹದಲ್ಲಿದೆ. ಹೀಗಿರುವಾಗ ಒಂದು ಮಾರ್ಗದರ್ಶಕ ತತ್ವವನ್ನು ಎಲ್ಲ ವಿಧಾನಗಳಿಂದಲೂ ಉಪೇಕ್ಷಿಸಿ, ಇನ್ನೊಂದು ತೀವ್ರ ವಿವಾದಾಸ್ಪದವಾದ ಹಾಗೂ ಧರ್ಮದಲ್ಲಿ ಹಸ್ತಕ್ಷೇಪಿಸುವಂತಹ ತತ್ವದ ಅನುಷ್ಠಾನಕ್ಕೇ ಒತ್ತಾಯಿಸುವುದು ಎಷ್ಟು ನ್ಯಾಯಬದ್ಧ?

ಸಂವಿಧಾನದ 44ನೇ ವಿಧಿಯು ಅಸ್ತಿತ್ವದಲ್ಲಿರುವವರೆಗೂ ಸಮಾನ ವ್ಯಕ್ತಿ ನಿಯಮದ ಆಂದೋಲನವು ಬಲಗೊಳ್ಳುತ್ತಲೇ ಹೋದೀತು. ಅದೇ ವೇಳೆ ಮುಸ್ಲಿಮ್ ವ್ಯಕ್ತಿ ನಿಯಮದ ಮೇಲಿನ ಅಪಾಯ ವರ್ಧಿಸುತ್ತಲೇ ಹೋದೀತು. ಸರಕಾರಿ ವಕ್ತಾರರು ತಾವು ಮುಸ್ಲಿಮ್ ವ್ಯಕ್ತಿ ನಿಯಮವನ್ನು ಬದಲಾಯಿಸುವುದಿಲ್ಲವೆಂದು ಎಷ್ಟೇ ಆಶ್ವಾಸನೆ ಕೊಟ್ಟರೂ ಈ ವಸ್ತುಸ್ಥಿತಿ ಬದಲಾಗುವುದಿಲ್ಲ. ಏಕೆಂದರೆ ಸರಕಾರಿ ಧುರೀಣರ ಆಶ್ವಾಸನೆ ಮತ್ತವರ ವಾಗ್ದಾನಗಳ ಅವಸ್ಥೆ ಎಲ್ಲರಿಗೂ ಗೊತ್ತಿದ್ದದ್ದೇ.

ಏನಿದ್ದರೂ ವಾಗ್ದಾನಗಳಿಂದ ಏನೇನೂ ಆಗಲಾರದು. ಏಕೆಂದರೆ ಅಧಿಕಾರಸ್ಥ ಜನರು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ತಮ್ಮಿಚ್ಛೆಯ ಬದಲಾವಣೆಗಳನ್ನು ತರುತ್ತಲೇ ಇರುತ್ತಾರೆ. ಸರಕಾರಗಳು ಬದಲಾಗುತ್ತಲೇ ಇರುತ್ತದೆ.

ಇವತ್ತು ಈ ಅಧಿಕಾರಸ್ಥರು ಕೊಡುತ್ತಿರುವ ವಾಗ್ದಾನಗಳನ್ನು ನಾಳೆ ಅವರ ಉತ್ತರಾಧಿಕಾರಿಗಳು ಪಾಲಿಸುವರೆಂಬ ಯಾವ ಭರವಸೆಯೂ ಇಲ್ಲ. ಆದ್ದರಿಂದ ಸಂವಿಧಾನದ ಈ ವಿಧಿಯನ್ನು ಒಂದೋ ಪೂರ್ತಿ ಕೈಬಿಡಬೇಕು. ಇಲ್ಲವೇ ಇದರಲ್ಲಿ ಮುಸ್ಲಿಮ್ ವ್ಯಕ್ತಿ ನಿಯಮಕ್ಕೆ ರಕ್ಷಣೆಯ ಪೂರ್ಣ ಆಶ್ವಾಸನೆ ಸಿಗುವ ರೀತಿಯಲ್ಲಿ ಬದಲಾವಣೆ ಮಾಡಬೇಕು. ಸಂವಿಧಾನ ನಿರ್ಮಾಣ ಸಮಿತಿಯು ಸಂವಿಧಾನದ ಪ್ರಸ್ತುತ 44ನೇ ವಿಧಿಯ ಪರಿಶೀಲನೆ ನಡೆಸುತ್ತಿದ್ದಾಗ ಅಂದಿನ ಮುಸ್ಲಿಮ್ ಸಂಸತ್ ಸದಸ್ಯರು ಇದರಲ್ಲಿ ಅನೇಕ ತಿದ್ದುಪಡಿಗಳನ್ನು ಸೂಚಿಸಿದ್ದರು. ಉದಾ: ಮುಹಮ್ಮದ್ ಇಸ್ಮಾಈಲ್(ಮದ್ರಾಸ್) ಅವರು ಈ ಕೆಳಗಿನ ತಿದ್ದುಪಡಿಯ ಸೂಚನೆ ಕೊಟ್ಟಿದ್ದರು.

'Provided that any group, section or community of people shall not be obliged to give up its own personal law, in case it has such a law. (Directive Principles in the Indian constitution. By K.C.Markanden P.193)

'.....ಆದರೆ ದೇಶದ ಯಾವುದಾದರೂ ಒಂದು ಗುಂಪು, ವರ್ಗ ಅಥವಾ ಪಂಗಡವು ತನ್ನದೇ ಆದ ವ್ಯಕ್ತಿ ನಿಯಮವನ್ನು ಹೊಂದಿದ್ದರೆ ಅದನ್ನು ವರ್ಜಿಸುವಂತೆ ಒತ್ತಾಯಿಸಲಾಗದು.'

ಇನ್ನೊಂದು ತಿದ್ದುಪಡಿಯನ್ನು ಜ। ನಝೀರುದ್ದೀನ್ ಅಹ್ಮದ್ ಅವರು ಸೂಚಿಸಿದ್ದರು. ಅದರ ಮೂಲ ಪಾಠ ಹೀಗಿದೆ:

'Provided that the personal law of any community which has been guaranteed by the state shall not be changed except with the previous approval of the community ascertainde in such manner as the Union Legislature may determine by Law'(Ibid.page 193)

'ಆದರೆ ಯಾವುದೇ ಜನಾಂಗಕ್ಕೆ ಸರಕಾರವು ಭದ್ರತೆಯ ಆಶ್ವಾಸನೆ ಕೊಟ್ಟಂತಹ ವ್ಯಕ್ತಿ ನಿಯಮವನ್ನು, ಆ ಜನಾಂಗದ ಪೂರ್ವಭಾವೀ ಅನುಮತಿಯನ್ನು ಕೇಂದ್ರ ಶಾಸಕಾಂಗವು ಕಾನೂನು ಮೂಲಕ ನಿಶ್ಚಯಿಸಿದ ವಿಧಾನ ಮೂಲಕ ಪಡೆಯುವ ವರೆಗೆ ಬದಲಾಯಿಸಲಾಗದು.'

ಪ್ರಸ್ತುತ ತಿದ್ದುಪಡಿ ಸೂಚನೆಯನ್ನು ಮಂಡಿಸುತ್ತಾ ಶ್ರೀಯುತರು ಈ 44ನೇ ವಿಧಿಯು ಸಂವಿಧಾನದ ಧಾರ್ಮಿಕ ಸ್ವಾತಂತ್ರ್ಯದ ವಿಧಿಗೆ ತದ್ವಿರುದ್ಧವಾಗಿದ್ದು, ಧಾರ್ಮಿಕ ಸ್ವಾತಂತ್ರ್ಯ ವಿಧಿಯಲ್ಲಿ ನೀಡಲಾಗಿರುವ ಭದ್ರತೆಯನ್ನು ಇದು ಇಲ್ಲವಾಗಿಸುತ್ತದೆ ಎಂದು ಎಚ್ಚರಿಸಿದ್ದರು.

ಮೂರನೇ ತಿದ್ದುಪಡಿಯನ್ನು ಮೊಹ್ಬೂಬ್ ಅಲೀ ಬೇಗ್ ಬಹಾದೂರ್(ಮದ್ರಾಸ್) ಅವರು ಸೂಚಿಸಿದ್ದರು. ಅದರ ಮೂಲ ಪಾಠ ಈ ಕೆಳಗಿನಂತಿದೆ:

'Provided that nothing in this article shall effect the personal law of the citizen'(Ibid P.193)

'ಆದರೆ ಈ ವಿಧಿಯು ಪ್ರಜೆಗಳ ವ್ಯಕ್ತಿ ನಿಯಮವನ್ನು ಯಾವ ರೀತಿಯಲ್ಲೂ ಬಾಧಿಸದು'

ನಾಲ್ಕನೇ ತಿದ್ದುಪಡಿಯನ್ನು ಬಿ.ಪೋಕರ್ ಬಹಾದೂರ್(ಮದ್ರಾಸ್) ಅವರು ಮಂಡಿಸಿದ್ದು

ಈ ತಿದ್ದುಪಡಿಯು ಮುಹಮ್ಮದ್ ಇಸ್ಮಾಈಲರ ಸೂಚಿತ ತಿದ್ದುಪಡಿಗೇ ಹೋಲುತ್ತಿತ್ತು. ಆಗ ಪ್ರಸ್ತುತ ತಿದ್ದುಪಡಿ ಸೂಚನೆಗಳ ಬಗ್ಗೆ ಸಂವಿಧಾನ ನಿರ್ಮಾಣ ಸಮಿತಿಯಲ್ಲಿ ಭಾರೀ ಬಿಸಿ ಬಿಸಿ ಚರ್ಚೆಗಳು ನಡೆದವು. ಅದರಲ್ಲಿ ಕೆ.ಎಂ. ಮುನ್ಶೀ, ಎಂ.ಆರ್. ಮಸಾನಿ, ಎ.ಕೆ. ಅಯ್ಯರ್ ಮುಂತಾದವರು ಮುಖ್ಯವಾಗಿ ಪಾಲ್ಗೊಂಡರು. ಪ್ರಸ್ತುತ ಚರ್ಚೆಯಲ್ಲಿ ಮುನ್ಶಿಯವರಂತೂ ಹೀಗೂ ಹೇಳಿಬಿಟ್ಟರು:

'It was the desire of the framers of the constitution to divorce religion from personal law......'(Ibid.P.195)

'ಈ ಸಂವಿಧಾನದ ನಿರ್ಮಾತೃಗಳು ಧರ್ಮದಿಂದ ವ್ಯಕ್ತಿ ನಿಯಮದ ವಿಚ್ಛೇದನವನ್ನೇ ಅಪೇಕ್ಷಿಸಿದ್ದರು'

ಅವರು ತಮ್ಮ ಭಾಷಣದಲ್ಲಿ ಟರ್ಕಿ ಮತ್ತು ಈಜಿಪ್ಟಿನ ವ್ಯಕ್ತಿ ನಿಯಮಗಳಲ್ಲಿ ಆದ ಬದಲಾವಣೆಯನ್ನು ಉದಾಹರಿಸಿದರು. ಆದರೆ ಅನಂತರ ಡಾ। ಅಂಬೇಡ್ಕರ್ ಅವರು ಮುಸ್ಲಿಮರ ಮೇಲೆ ಸಮಾನ ಪೌರ ನಿಯಮವನ್ನು ಹೇರಲಾಗದು ಎಂದು ಆಶ್ವಾಸನೆ ಕೊಟ್ಟರು.

ಕೇವಲ ತಮ್ಮ ಸ್ವ ಇಚ್ಛೆಯಿಂದ ಸಮಾನ ಪೌರ ನಿಯಮಕ್ಕೆ ಬದ್ಧರಾಗ ಬಯಸುವ ಜನರನ್ನು ಮಾತ್ರ ಅದರ ವ್ಯಾಪ್ತಿಗೆ ಸೇರಿಸಿ ಉಳಿದವರನ್ನು ಇದರ ಹೇರಿಕೆಯಿಂದ ಮುಕ್ತವಾಗಿರಿಸ ಬೇಕಾದುದು ಮುಂದಿನ ಸಂಸತ್ತಿನ ಕರ್ತವ್ಯ ಎಂದೂ ಡಾ। ಅಂಬೇಡ್ಕರ್ ಹೇಳಿದ್ದರು. ಅವರ ಈ ಆಶ್ವಾಸನೆಯ ಬಳಿಕ ಪ್ರಸ್ತುತ ಎಲ್ಲ ತಿದ್ದುಪಡಿ ಸೂಚನೆಗಳನ್ನು ತಳ್ಳಿ ಹಾಕಲಾಯಿತು ಮತ್ತು ಕರಡು ಮಸೂದೆಯನ್ನು ಅಂಗೀಕರಿಸಲಾಯಿತು. ಅದೇ ಈಗ ಸಂವಿಧಾನದ 44ನೇ ವಿಧಿಯ ರೂಪದಲ್ಲಿ ಅಸ್ತಿತ್ವದಲ್ಲಿದೆ.

ಮುಹಮ್ಮದ್ ಇಸ್ಮಾಈಲ್(ಮದ್ರಾಸ್) ಅವರು ಮುಸ್ಲಿಮ್ ವ್ಯಕ್ತಿ ನಿಯಮದ ಸಂರಕ್ಷಣೆಗಾಗಿ, ಸಂವಿಧಾನದ ಮೂಲಭೂತ ಹಕ್ಕುಗಳ ವಿಧಿಗಳಲ್ಲಿ ಈ ಕೆಳಗಿನ ಸೇರ್ಪಡೆಯನ್ನು ಸೂಚಿಸಿದ್ದರು:

'To follow the personal law of the group or community to which he belongs or professes to belong.'(Constituent Assembly Debates Vol: VII P.721)

'ಅವನು (ಪೌರ) ಯಾವ ವರ್ಗ- ಅಥವಾ ಪಂಗಡಕ್ಕೆ ಸೇರಿರುವನೋ ಅಥವಾ ಸೇರಬಯಸುವನೋ ಆ ವರ್ಗ ಅಥವಾ ಪಂಗಡದ ವ್ಯಕ್ತಿ ನಿಯಮವನ್ನು ಪಾಲಿಸಲು ಅವನಿಗೆ ಸ್ವಾತಂತ್ರ್ಯವಿರುವುದು.'

ಆದರೆ ಈ ಸೇರ್ಪಡೆಯ ಪ್ರಸ್ತಾಪವನ್ನು ಸಂವಿಧಾನ ನಿರ್ಮಾಣ ಸಮಿತಿಯು ತಿರಸ್ಕರಿಸಿಬಿಟ್ಟಿತು. ಒಟ್ಟಿನಲ್ಲಿ ನಾವಿಂದು ಎದುರಿಸುತ್ತಿರುವ ಅಪಾಯವನ್ನು ಸಂವಿಧಾನ ನಿರ್ಮಾಣದ ವೇಳೆಯೇ ಕೆಲವು ಹಿರಿಯರು ಮನಗಂಡಿದ್ದರು. ಇನ್ನು ಡಾ। ಅಂಬೇಡ್ಕರ್

ಮುಸ್ಲಿಮರಿಗೆ ಕೊಟ್ಟ ಆಶ್ವಾಸನೆಯ ವಿಚಾರ. ಸರಕಾರ ಅದಕ್ಕೆ ಮಹತ್ವ ಕೊಡುವುದಂತಿರಲಿ ಅಂತಹ ಒಂದು ಆಶ್ವಾಸನೆಯೇ ನಮ್ಮ ಆಡಳಿತಾರೂಢರ ನೆನಪಿನಲ್ಲಿಲ್ಲ, ಆದ್ದರಿಂದ ಇದೀಗ ಅಗತ್ಯವಿರುವುದು ಆಶ್ವಾಸನೆಗಳಲ್ಲ, ಸಂವಿಧಾನದಲ್ಲಿ ಅವಶ್ಯಕ ತಿದ್ದುಪಡಿ ಮಾಡಿ ಮುಸ್ಲಿಮರಿಗೆ ತಮ್ಮ ವ್ಯಕ್ತಿ ನಿಯಮವನ್ನು ಅನುಸರಿಸುವ ಸಂಪೂರ್ಣ ಸ್ವಾತಂತ್ರ್ಯವಿದೆ ಎಂದು ಸ್ಪಷ್ಟ ಶಬ್ದಗಳಲ್ಲಿ ಸಾರಬೇಕಾಗಿದೆ. ಈ ರೀತಿಯ ತಿದ್ದುಪಡಿಯನ್ನು ನಮ್ಮ ಸಂವಿಧಾನದಲ್ಲಿ ಮಾಡುವವರೆಗೂ ಸಮಾನ ನಿಯಮದ ಭೀಕರ ಕತ್ತಿ ಮುಸ್ಲಿಮ್ ವ್ಯಕ್ತಿ ನಿಯಮದ ಮೇಲೆ ತೂಗುತ್ತಲೇ ಇರುವುದು.

ರಾಷ್ಟ್ರದ ಜಾತ್ಯತೀತ ಸ್ವರೂಪ

ಸಾಮಾನ್ಯವಾಗಿ ಮುಸ್ಲಿಮ್ ಪರ್ಸನಲ್‌ಲಾದ ವಿರೋಧಿಗಳು ನಮ್ಮ ದೇಶವು ಜಾತ್ಯತೀತ ಸ್ವರೂಪದ್ದು ಎಂಬುದನ್ನೇ ತಮ್ಮ ವಾದಕ್ಕೆ ಆಧಾರವೆಂಬಂತೆ ಮಂಡಿಸುತ್ತಾರೆ. ಅವರ ದೃಷ್ಟಿಯಲ್ಲಿ ಎಲ್ಲ ಪ್ರಜೆಗಳ ಮೇಲೆ ಒಂದೇ ಆಂತರಿಕ ಕಾನೂನನ್ನು ಜಾರಿಗೊಳಿಸಬೇಕಾದುದು ಜಾತ್ಯತೀತತೆಯ ಮೂಲ ಬೇಡಿಕೆ. ವಿವಿಧ ಆಂತರಿಕ ಕಾನೂನು(Family Law)ಗಳು ವಿಭಿನ್ನ ಪಂಗಡಗಳ ಮಧ್ಯೆ ಅಂತರ ಹೆಚ್ಚಿಸುವ(Discirimination) ಮೂಲಕ ಜಾತ್ಯತೀತತೆಗೆ ಮಾರಕವಾಗುತ್ತವೆಂದು ಈ ಜನರ ಅನಿಸಿಕೆ. ಲೋಕದ ಭೂಪಟದಲ್ಲಿ ಭಾರತವೊಂದೇ ಜಾತ್ಯತೀತ ರಾಷ್ಟ್ರವೋ ಅಥವಾ ಬೇರೆ ಜಾತ್ಯಾತೀತ ರಾಷ್ಟ್ರಗಳೂ ಉಂಟೇ ಎಂದು ಈ ತೀವ್ರ ಜಾತ್ಯಾತೀತವಾದಿ(Ultra Secularist) ಗಳೊಡನೆ ಯಾರಾದರೂ ಪ್ರಶ್ನಿಸಬೇಕು. ಮುಸ್ಲಿಮ್ ಪರ್ಸನಲ್ ಲಾ ಗೆ ಕೈ ಹಾಕದೆ ಇರುವ ಅದೆಷ್ಟೋ ರಾಷ್ಟ್ರಗಳು ಇವೆ ಎಂಬುದನ್ನು ಇವರಿಗೆ ತಿಳಿಸಬೇಕಾಗಿದೆ. ಉದಾ: ಥೈಲಾಂಡ್. ಇದೊಂದು ಬೌದ್ಧ ಬಹುಸಂಖ್ಯಾತ ರಾಷ್ಟ್ರ. ಇಲ್ಲಿನ ಸರಕಾರವು ತನ್ನ ಆಂತರಿಕ ಕಾನೂನುಗಳನ್ನು ಸಾಕಷ್ಟು ಸುಧಾರಿಸಿದೆ. ಆದರೆ ಈ ಸುಧಾರಣೆ ಬದಲಾವಣೆಗಳನ್ನೆಲ್ಲಾ ಬೌದ್ಧ ವಲಯಕ್ಕೆ ಮಾತ್ರ ಸೀಮಿತವಾಗಿರಿಸಿದೆ. ಮುಸ್ಲಿಮರನ್ನು ಇದರಿಂದ ಹೊರತುಪಡಿಸಿ ಅವರಿಗೆ ತಮ್ಮ ವ್ಯಕ್ತಿ ನಿಯಮವನ್ನು ಪಾಲಿಸುವ ಮುಕ್ತ ಸ್ವಾತಂತ್ರ್ಯವನ್ನು ಕೊಟ್ಟಿದೆ. ಬರ್ಮಾದಲ್ಲೂ ಇದೇ ಸ್ಥಿತಿ. ಗ್ರೀಸ್‌ನಲ್ಲಂತೂ ಮುಸ್ಲಿಮ್ ವಿದ್ವಾಂಸರುಗಳ(ಮುಫ್ತಿ) ಮೂಲಕವೇ ಮುಸ್ಲಿಮ್ ವ್ಯಕ್ತಿ ನಿಯಮಗಳನ್ನು ಅನುಷ್ಠಾನಿಸಲಾಗುತ್ತದೆ. ಆಫ್ರಿಕನ್ ರಾಷ್ಟ್ರಗಳಾದ ಇಥಿಯೋಪಿಯ, ಗಾನಾ, ಗೋಲ್ಡ್‌ಕೋಸ್ಟ್, ಉಗಾಂಡಾ ಇತ್ಯಾದಿಗಳಲ್ಲೂ ಮುಸ್ಲಿಮ್ ವ್ಯಕ್ತಿ ನಿಯಮವು ಸುರಕ್ಷಿತವಾಗಿದೆ. ಈ ಪೈಕಿ ಹೆಚ್ಚಿನ ರಾಷ್ಟ್ರಗಳೆಲ್ಲಾ ಜಾತ್ಯತೀತ ಸಂವಿಧಾನವನ್ನು ಹೊಂದಿದೆ. ಕೆಲವಂತೂ ಕಮ್ಯುನಿಸ್ಟ್ ರಾಷ್ಟ್ರಗಳು. ಆದರೆ ಈ ಯಾವ ರಾಷ್ಟ್ರದ ಜಾತ್ಯತೀತತೆಯೂ ಮುಸ್ಲಿಮ್ ವ್ಯಕ್ತಿ ನಿಯಮಕ್ಕೆ ವಿರುದ್ಧವಲ್ಲವಾಗಿರುವಾಗ ಭಾರತದ ಜಾತ್ಯತೀತತೆಯು ಮಾತ್ರ ಮುಸ್ಲಿಮ್ ವ್ಯಕ್ತಿನಿಯಮಕ್ಕೆ ಏಕೆ ಬಾಧಕವಾಗಬೇಕು?

ರಾಷ್ಟ್ರೀಯ ಭಾವೈಕ್ಯ

ದೇಶದಲ್ಲಿ ಆಗಾಗ ಸ್ಫೋಟಗೊಳ್ಳುವ ಕೋಮು ಕಲಹಗಳ ಬಗ್ಗೆ ಹೇಳಿಕೆ ನೀಡುವಾಗ ನಮ್ಮ ದೇಶದ ರಾಜಕಾರಣಿಗಳು, 'ರಾಷ್ಟ್ರೀಯ ಭಾವೈಕ್ಯ' ಸ್ಥಾಪನೆಯಾಗಬೇಕಾದರೆ ಸಮಾನ ಪೌರ ನಿಯಮದ ಅನುಷ್ಠಾನ ಅತ್ಯಗತ್ಯ ಎಂಬ ರಾಗ ಹೊರಡಿಸುತ್ತಾರೆ. ಅಂದರೆ ಗಲಭೆಗಳಿಗೆಲ್ಲಾ ಈ ಮುಸ್ಲಿಮ್ ವ್ಯಕ್ತಿ ನಿಯಮವೇ ಕಾರಣವೆಂದಾಯಿತು. ಇದನ್ನು ಕೊನೆಗಾಣಿಸಿ ಸಮಾನ ಪೌರ ನಿಯಮವನ್ನು ಜಾರಿಗೊಳಿಸಿಬಿಟ್ಟರೆ ಗಲಭೆಗಳು ಪೂರ್ತಿ ನಿಂತೇ ಬಿಡುತ್ತವೆ. ಈ ಚಿಕಿತ್ಸೆಗೆ ಏನೆನ್ನಬೇಕು?

ಈ ದೇಶದಲ್ಲಿ ಮುಸ್ಲಿಮ್ ವ್ಯಕ್ತಿ ನಿಯಮದ ಕಾರಣ ಎಲ್ಲಿ ಎಷ್ಟು ಗಲಭೆಗಳಾಗಿವೆ ಎಂಬುದನ್ನು ಇವರು ತಿಳಿಸಲಿ. ದೇಶದಾದ್ಯಂತ ನಡೆದ ಸಹಸ್ರಾರು ಗಲಭೆಗಳ ಪೈಕಿ ಅಂತಹ ಒಂದನ್ನಾದರೂ ಉದಾಹರಿಸಲಿ. ಈವರೆಗೆ ವಿವಿಧ ಗಲಭೆಗಳ ತನಿಖೆಗೆಂದು ನೇಮಕವಾದ ಯಾವುದೇ ಆಯೋಗವು ಮುಸ್ಲಿಮ್ ವ್ಯಕ್ತಿ ನಿಯಮವು ಗಲಭೆಗೆ ಹೇತುವಾಯಿತೆಂದು ಒಮ್ಮೆಯೂ ವರದಿ ಸಲ್ಲಿಸಿದ್ದಿಲ್ಲ. ಹೀಗಿರುವಾಗ ಕೋಮು ಗಲಭೆಗಳಿಗೂ ಮುಸ್ಲಿಮ್ ವ್ಯಕ್ತಿ ನಿಯಮಕ್ಕೂ ನಂಟು ಕಲ್ಪಿಸುವುದರ ಅರ್ಥವೇನು?

ಕೋಮುಗಲಭೆಗಳ ಹೊರತಾಗಿಯೂ, ವಿಭಿನ್ನ ಪಂಗಡಗಳ ಮಧ್ಯೆ ಸಾಮರಸ್ಯ ಸ್ಥಾಪನೆಗಾಗಿ ಸಮಾನ ಪೌರ ನಿಯಮ ಅವಶ್ಯಕವೆಂದು ಕೆಲವರು ವಾದಿಸುತ್ತಾರೆ. ಜಸ್ಟಿಸ್ ಶ್ರೀ ವೈ.ವಿ. ಚಂದ್ರಚೂಡ್ ಅವರು ತಮ್ಮ ಮುಂಬಯಿಯ ಒಂದು ಭಾಷಣದಲ್ಲಿ ಹೇಳಿದ್ದರು.

'One Law of marriage for all would be an important step towards National Integration' (Indian Express 21-1-1967)

'ಎಲ್ಲರಿಗಾಗಿ ಒಂದೇ ವಿವಾಹ ಕಾಯಿದೆ ಮಾಡಿದರೆ ಅದು ರಾಷ್ಟ್ರೀಯ ಭಾವೈಕ್ಯದ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆ ಎನಿಸಬಹುದು.'

ಆದರೆ ವಾಸ್ತವದಲ್ಲಿ ಇದೊಂದು ಕುತರ್ಕ. ಯಾಕೆಂದರೆ ಒಂದು ದೇಶದ ಅಲ್ಪಸಂಖ್ಯಾತ ಪಂಗಡದಲ್ಲಿ ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ನಾಶ ಮಾಡಲಾಗುತ್ತಿದೆ ಎಂಬ ಭಾವನೆ ಬೆಳೆದುಬಿಟ್ಟರೆ ಇದರ ಪ್ರತಿಕ್ರಿಯೆ ಖಂಡಿತ ಚೆನ್ನಾಗಿರುವುದಿಲ್ಲ. ಇದರಿಂದ ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಪಂಗಡಗಳ ಮಧ್ಯೆ ಇರುವ ಸಂಬಂಧದ ಮೇಲೆ ಖಂಡಿತ ದುಷ್ಪರಿಣಾಮ ಬೀಳುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಿರ್ಣಾಯಕ ಸ್ಥಾನ ಹೊಂದಿರುವ ಬಹುಸಂಖ್ಯಾತರು, ಅಲ್ಪಸಂಖ್ಯಾತರ ಕುರಿತು ಸ್ವಲ್ಪ ವಿಶಾಲ ಧೋರಣೆ ತೋರಿಸಿ, ವಿವಿಧ ವರ್ಗ ಮತ್ತು ಪಂಗಡಗಳಿಗೆ ಹೆಚ್ಚೆಚ್ಚು ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯ ಸಿಗುವಂತೆ ಮಾಡಿದರೆ ಅವರ ನಡುವಣ ಸಂಬಂಧವು ಸಾಕಷ್ಟು ಸೌಹಾರ್ದಯುತವಾದೀತು. ಇದರಿಂದ ಸಾಮರಸ್ಯ ಮತ್ತು ರಾಷ್ಟ್ರೀಯ ಭಾವೈಕ್ಯದ ವಾತಾವರಣ ನಿರ್ಮಾಣಕ್ಕೂ ಸಹಾಯವಾದೀತು.

ಇನ್ನು ರಾಷ್ಟ್ರೀಯ ಭಾವೈಕ್ಯಕ್ಕೆ ಸಮಾನ ಪೌರ ನಿಯಮ ಅವಶ್ಯಕ ಎಂಬ ತರ್ಕದಂತೆ ಹೋಗುವುದಾದರೆ ಒಂದು 'ಸಮಾನ ಆರಾಧನಾ ನಿಯಮ' (Uniform Worship Code) ಕೂಡಾ ಬಹಳ ಅವಶ್ಯಕವೆನಿಸಬಹುದು. ಯಾಕೆಂದರೆ ಪ್ರಸ್ತುತ ವಾದ ಸರಿಯೆಂದಾದರೆ ಮಸೀದಿ- ಮಂದಿರಗಳನ್ನು ಪ್ರತ್ಯೇಕಗೊಳಿಸಿ ಯಾಕಿಡಬೇಕು? ಅವೆಲ್ಲವನ್ನು ಕೊನೆಗೊಳಿಸಿ ರಾಷ್ಟ್ರೀಯ ಆರಾಧನಾಲಯ(National Temples)ಗಳನ್ನು ಯಾಕೆ ಸ್ಥಾಪಿಸಬಾರದು?

ಇಂತಹ 'ಆರಾಧನಾಲಯ'ಗಳಲ್ಲಿ ಎಲ್ಲ ವರ್ಗ-ಪಂಗಡಗಳ ಜನರು ಒಂದೇ ಸಾಲಲ್ಲಿ ನಿಂತು ರಾಷ್ಟ್ರೀಯ ನಿಯಮ(National Code)ದ ಪ್ರಕಾರ ಸಮಾನ ರೀತಿಯ 'ಆರಾಧನೆ' ಮಾಡಬಹುದಲ್ಲಾ? ಇಲ್ಲಿ ಪೂಜೆಯನ್ನು ದೇವರ ಬದಲು ರಾಷ್ಟ್ರ(Nation)ಕ್ಕೆ ಸಲ್ಲಿಸಬಹುದಲ್ಲಾ? ಯಾಕೆಂದರೆ ದೇವರ ಹೆಸರು ಇದ್ದರೇನೇ ಬೇರೆ ಬೇರೆ ವರ್ಗಗಳ ಸಮಸ್ಯೆ ಉಂಟಾಗಿ ಕೋಮುವಾದ ತಲೆಯೆತ್ತಿ ಜಗಳವಾಗುವುದು. ಈಗ ಅದನ್ನೇ ಕೊನೆಗೊಳಿಸಿ ಬಿಟ್ಟರೆ ಸಮಸ್ಯೆ ಪರಿಹಾರವಾಗಿ ರಾಷ್ಟ್ರೀಯ ಭಾವೈಕ್ಯ ನಿರ್ಮಾಣವಾಗಬಹುದಲ್ಲವೇ?

ಆದರೆ ತಮ್ಮದೇ ತರ್ಕಕ್ಕೆ ಪೂರಕವಾಗಿರುವ ಇಷ್ಟು ಸರಳ ಮಾತನ್ನು ನೇರವಾಗಿ ಹೇಳಲು ರಾಜಕಾರಣಿಗಳು ಅದೇಕೋ ಬಹಳ ಹಿಂಜರಿಯುತ್ತಿದ್ದಾರೆ.

ಆಧುನಿಕ ಸಂಸ್ಕೃತಿಯ ಬೇಡಿಕೆಗಳು

ಮುಸ್ಲಿಮರ ಒಂದು ಸೀಮಿತ ಗುಂಪು ಆಧುನಿಕತೆಯ ಪ್ರಭಾವದಿಂದಾಗಿ 'ಮುಸ್ಲಿಮ್ ವ್ಯಕ್ತಿ ನಿಯಮದಲ್ಲಿ' ಬದಲಾವಣೆಯಾಗಬೇಕೆಂದು ಒತ್ತಾಯಿಸುತ್ತದೆ. ಸಂಖ್ಯೆಯಲ್ಲಿ ತೀರಾ ನಗಣ್ಯವಾಗಿರುವ ಈ ಗುಂಪಿನ ಹೆಚ್ಚಿನವರು ಸ್ವಲ್ಪ 'ನವೀನ ಬಗೆಯ ವಾತಾವರಣ'ದಲ್ಲಿ ಕಣ್ಣು ತೆರೆದವರು. ಶರೀಅತ್ ಕಾನೂನುಗಳು ಕ್ರೂರವಾಗಿವೆ ಅಥವಾ ಮುಸ್ಲಿಮ್ ಸಮಾಜದಲ್ಲಿ ಉಂಟಾಗಿರುವ ಕೆಡುಕುಗಳಿಗೆ ಈ ಕಾನೂನುಗಳೇ ಕಾರಣ. ಆದ್ದರಿಂದ ಕಾನೂನುಗಳನ್ನು ಸುಧಾರಿಸಬೇಕು ಎಂಬುದಂತೂ ಇವರ ಪ್ರಸ್ತುತ ಒತ್ತಡಕ್ಕೆ ಕಾರಣವಲ್ಲ. ಯಾಕೆಂದರೆ ಶರೀಅತ್ ಕಾನೂನುಗಳು ಅಲ್ಲಾಹನಿಂದಲೇ ಅವತರಿಸಲ್ಪಟ್ಟಿದ್ದು ಅವನು ತನ್ನೆಲ್ಲ ದಾಸರ ಹಿತಾಸಕ್ತಿಗಳನ್ನು ಚೆನ್ನಾಗಿಯೇ ತಿಳಿದಿರುವನು. ವಾಸ್ತವದಲ್ಲಿ ಈ ಜನರು ಆಧುನಿಕ ಸಂಸ್ಕೃತಿಯ ಕಣ್ಕೋರೈಸುವ ಬೆಡಗಿನೆದುರು ಗಲಿಬಿಲಿಗೊಂಡು ನ್ಯಾಯ, ಸಮಾನತೆ ಇತ್ಯಾದಿ ವಿಷಯಗಳಲ್ಲೂ ಆಧುನಿಕ ಸಂಸ್ಕೃತಿಯ ಕೊಡುಗೆಯಾಗಿರುವ ವಿಶಿಷ್ಟ ಕಲ್ಪನೆಗಳನ್ನು ಅಂಗೀಕರಿಸಿದ್ದಾರೆ. ಆ ಕಲ್ಪನೆಗಳ ಗುಂಗಿನಲ್ಲಿ ಅವರು ಇಸ್ಲಾಮಿನ ಸಾಮಾಜಿಕ ನಿಯಮಗಳನ್ನು ಅಪೂರ್ಣವೆಂದು ಭಾವಿಸುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಯು ಈಗ ಹಳಸಲಾಗಿ ಹೋಗಿದೆ. ಏಕೆಂದರೆ ಅವು ಆಧುನಿಕ ಒಲವುಗಳೊಂದಿಗೆ ಸರಿಹೊಂದುವುದಿಲ್ಲ. ಆದ್ದರಿಂದ ಅವರು ಈ ಬಂಧನದಿಂದ ಮುಕ್ತರಾಗಿ ಆಧುನಿಕ ಪ್ರವೃತ್ತಿಗೆ ಅನುಗುಣವಾದ ಸಾಮಾಜಿಕ ವ್ಯವಸ್ಥೆಯೊಂದನ್ನು ರೂಪಿಸಲು ಅಪೇಕ್ಷಿಸುತ್ತಿದ್ದಾರೆ. ಪ್ರಸ್ತುತ ವ್ಯವಸ್ಥೆಯಲ್ಲಿ ಸ್ತ್ರೀ ಪುರುಷರಿಗೆ ಸಮಾನ ಸ್ಥಾನಮಾನ ಪ್ರಾಪ್ತವಾಗಬೇಕೆಂದು ಅವರು ಭಾವಿಸುತ್ತಾರೆ.

ಒಂದು ವೇಳೆ ಈ ಜನರು ಮುಕ್ತ ಹೃದಯದಿಂದ ಇಸ್ಲಾಮೀ ಸಾಮಾಜಿಕ ಸಿದ್ಧಾಂತವನ್ನು ಅಭ್ಯಸಿಸುತ್ತಿದ್ದರೆ ಹಾಗೂ ಮನುಷ್ಯ ಪ್ರಕೃತಿ ಮತ್ತದರ ನೈತಿಕ ಸ್ವರೂಪವನ್ನು ನಿರ್ಲಕ್ಷಿಸದೆ ಇರುತ್ತಿದ್ದರೆ ಖಂಡಿತವಾಗಿಯೂ ಇವರಿಗೆ ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯುನ್ನತ ದರ್ಜೆಯ ಸಮತೋಲನ, ಸೌಂದರ್ಯ ಮತ್ತು ಸೂಕ್ತತೆ ಎದ್ದು ಕಾಣುತ್ತಿತ್ತು. ನಿಸ್ಸಂದೇಹವಾಗಿಯೂ ಇಸ್ಲಾಮ್, ಪುರುಷನಿಗೆ ಸ್ತ್ರೀಯ ಮೇಲೆ ಪ್ರಾಬಲ್ಯ ನೀಡಿದೆ. ಆದರೆ ಈ ಪ್ರಾಬಲ್ಯವು ಸ್ಥಾನಮಾನದ ದೃಷ್ಟಿಯಲ್ಲಿ ಮಾತ್ರ. ಈ ಪ್ರಾಬಲ್ಯವು ವಾಸ್ತವದಲ್ಲಿ ಪುರುಷನ ಪ್ರಕೃತಿ ಸಹಜವಾದ ವಿಶೇಷತೆಗಳ ಆಧಾರದಲ್ಲಿದೆ. ಇಂತಹ ಪ್ರಾಬಲ್ಯವಿಲ್ಲದೆ ಕುಟುಂಬ ಜೀವನದಲ್ಲಿ ಯಾವುದೇ ಶಿಸ್ತು ಖಂಡಿತ ಉಳಿಯಲಾರದು. ನೈತಿಕ ಮೌಲ್ಯಗಳೂ ಖಂಡಿತ ಉಳಿಯಲಾರವು. ಇದೇ ಹಿನ್ನೆಲೆಯಲ್ಲಿ ಇಸ್ಲಾಮ್ ತಲಾಕ್‌ನ(ವಿವಾಹ ವಿಚ್ಛೇದನೆಯ) ಹಕ್ಕನ್ನು ಸ್ತ್ರೀಯ ಬದಲು ಪುರುಷನಿಗೆ ಮಾತ್ರ ಕೊಟ್ಟಿದೆ. ಆದರೆ ಸ್ತ್ರೀಗೆ ಕೂಡಾ 'ಖುಲಾ'ದ ರೂಪದಲ್ಲಿ ತನ್ನ ಗಂಡನಿಂದ ಬೇರ್ಪಡುವ ಅಧಿಕಾರವನ್ನು ನೀಡಲಾಗಿದೆ. ಇದೇ ರೀತಿ ತಂದೆಯ ಆಸ್ತಿಯಲ್ಲಿ ಹೆಣ್ಮಕ್ಕಳಿಗೆ ಅರ್ಧದಷ್ಟು ಪಾಲನ್ನು ಮಾತ್ರ ಕೊಡಲಾಗುತ್ತದೆ. ಯಾಕೆಂದರೆ ಇಸ್ಲಾಮ್ ಕುಟುಂಬ ನಿರ್ವಹಣೆಗಾಗಿ ಧನ ಸಂಪಾಧನೆ ಮಾಡುವ ಹೊಣೆಯನ್ನು ಪುರುಷನ ಮೇಲೆ ಹೊರಿಸಿದೆ. ಅಲ್ಲದೆ ಪತ್ನಿಯು 'ಮಹರ್'ನ ಹಣವನ್ನು (ಪತಿಯಿಂದ) ಪ್ರತ್ಯೇಕವಾಗಿಯೇ ಪಡೆಯುತ್ತಾಳೆ. ಆದ್ದರಿಂದ ಇಲ್ಲಿ ಹೆಣ್ಣು ಮತ್ತು ಗಂಡಿಗೆ ಸಿಗುವ ಪಾಲಿನಲ್ಲೂ ಅಂತರವಿರಬೇಕಾದುದು ನ್ಯಾಯವೇ ಆಗಿದೆ. ಆದರೆ ನ್ಯಾಯದ ಹೆಸರಲ್ಲಿ ಅನ್ಯಾಯದ ದೊಣ್ಣೆ ಬೀಸಲು ಹೊರಟಿರುವ ಆಧುನಿಕ ಸಂಸ್ಕೃತಿ ಈ ವಾಸ್ತವಿಕತೆಯನ್ನು ಒಪ್ಪೀತೇ? ಅದಂತೂ ಸಮಾನತೆಯ ಭೂತವನ್ನೇ ತನ್ನ ಮೇಲೆ ಹೇರಿಕೊಂಡಿದೆ. ನಿಜವಾಗಿ ಮನುಷ್ಯ ಪ್ರಕೃತಿಯ ಸಮಾನತೆಯ ಈ ಅತಿರೇಕ ಕಲ್ಪನೆಯನ್ನು ಎಂದೂ ಅಂಗೀಕರಿಸಿಲ್ಲ. ಈ ಕಲ್ಪನೆ ಎಲ್ಲ ಕಾಲಗಳಲ್ಲೂ ಅಪರಿಚಿತವಾಗಿಯೇ ಇತ್ತು. ತಂದೆ ಮತ್ತು ಮಗ ಇಬ್ಬರೂ ಮನುಷ್ಯರೆಂಬ ನೆಲೆಯಲ್ಲಿ ಸಮಾನರು. ಆದರೂ ತಂದೆಗೆ ಮಗನಿಗಿಂತ ಹೆಚ್ಚಿನ ಪ್ರಾಬಲ್ಯ ಇದ್ದೇ ಇರುತ್ತದೆ. ತಂದೆಯನ್ನು ಗೌರವಿಸುವುದು ಮತ್ತು ಅವನನ್ನು ಅನುಸರಿಸಬೇಕಾದುದು ಮಗನ ಮೇಲೆ ಕಡ್ಡಾಯವಾಗುತ್ತದೆ. ಆದರೆ ಸಮಾನತೆಯ ಈ ವಿಪರೀತ ದೃಷ್ಟಿಕೋನದ ಪ್ರಕಾರ ನೋಡ ಹೋದರೆ ತಂದೆ- ಪುತ್ರ ಇಬ್ಬರೂ ಸಮಾನರಾಗಿ ಬಿಡುತ್ತಾರೆ. ಅವರ ಸ್ಥಾನಮಾನದಲ್ಲಾಗಲೀ ಅಧಿಕಾರದಲ್ಲಾಗಲೀ ಯಾವುದೇ ವ್ಯತ್ಯಾಸವಿರುವುದಿಲ್ಲ. ಮಗನು ತಂದೆಯನ್ನು ಗೌರವಿಸುವ ಅಥವಾ ಅವನ ಆಜ್ಞಾಪಾಲನೆ ಮಾಡುವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ತಂದೆಯ ಆಜ್ಞೆಯನ್ನು ಮಗನು ಪಾಲಿಸಬೇಕು ಎಂದಾದರೆ ನ್ಯಾಯ ಮತ್ತು ಸಮಾನತೆಯ ಬೇಡಿಕೆಯಂತೆ ಮಗನ ಆಜ್ಞೆಯನ್ನು ತಂದೆ ಕೂಡಾ ಪಾಲಿಸಬೇಕು ಎಂಬ ಕುತರ್ಕ ಆಗ ಹುಟ್ಟಿಕೊಳ್ಳುತ್ತದೆ. ಆದರೆ ಆಧುನಿಕ ಸಮಾಜವು ತನ್ನೆಲ್ಲ ಪ್ರಗತಿವಾದದ ಹೊರತಾಗಿಯೂ ಈ ಬೇಡಿಕೆಯನ್ನು ತಂದೆಯ ಮೇಲೆ ಹೇರುವುದಿಲ್ಲ.

ಮುಸ್ಲಿಮ್ ರಾಷ್ಟ್ರಗಳಲ್ಲಿ ಮಾಡಲಾದ ಬದಲಾವಣೆಗಳು

ಮುಸ್ಲಿಮ್ ವ್ಯಕ್ತಿ ನಿಯಮವನ್ನು ಆಧುನಿಕ ಒಲವು ಹಾಗೂ ಸಿದ್ಧಾಂತಗಳಿಗೆ ಅನುಗುಣವಾಗಿ ಬದಲಾಯಿಸಬೇಕೆಂದು ಒತ್ತಾಯಿಸುವ ಜನರು ತಮ್ಮ ವಾದಕ್ಕೆ ಪೂರಕವಾಗಿ ಕೆಲವು ಮುಸ್ಲಿಮ್ ರಾಷ್ಟ್ರಗಳನ್ನು ಉದಾಹರಿಸುತ್ತಾರೆ. ಮುಸ್ಲಿಮರ ರಾಷ್ಟ್ರಗಳಲ್ಲೇ ಮುಸ್ಲಿಮ್ ಪರ್ಸನಲ್ ಲಾ ಬದಲಾಯಿಸಲ್ಪಟ್ಟಿರುವಾಗ ಭಾರತೀಯ ಮುಸ್ಲಿಮರು ಬದಲಾವಣೆಯ ಹೆಸರನ್ನೇ ದ್ವೇಷಿಸಲು ಅವರೇನು ಅತಿ ಮಾನವರೇ? ಎಂದು ಕೆಲವರು ಪ್ರಶ್ನಿಸುವುದುಂಟು. ಆದರೆ ವಾಸ್ತವದಲ್ಲಿ ಈ ಟೀಕಾಕಾರರು ವಸ್ತು ಸ್ಥಿತಿಯನ್ನು ಬಹಳಷ್ಟು ಹಿಗ್ಗಿಸಿ, ವಿಕೃತಗೊಳಿಸಿ ಪ್ರಚಾರ ಮಾಡುತ್ತಿದ್ದಾರೆ.

ಇಂದು ಹೆಚ್ಚಿನೆಲ್ಲಾ ಮುಸ್ಲಿಮ್ ರಾಷ್ಟ್ರಗಳ ಸ್ಥಿತಿ ಏನೆಂದರೆ ಅಲ್ಲಿಯ ಮುಸ್ಲಿಮ್ ವ್ಯಕ್ತಿ ನಿಯಮದಲ್ಲಿ ಈವರೆಗೆ ಕಿಂಚಿತ್ತೂ ಬದಲಾವಣೆ ಆದುದಿಲ್ಲ, ಬದಲಾಗಿ 'ಶರೀಅತ್' ನಿಯಮಗಳೇ ಸಕ್ರಿಯವಾಗಿ ಅಸ್ತಿತ್ವದಲ್ಲಿವೆ. ಉದಾ: ಸೌದಿ ಅರೇಬಿಯ, ಖತರ್, ಗಿನಿ, ಸೋಮಾಲಿಯ, ದುಬೈ ಮತ್ತು ನೈಜೀರಿಯ. ಈ ಪೈಕಿ ಕೆಲವು ರಾಷ್ಟ್ರಗಳಲ್ಲಿ 'ಹಂಬಲಿ ಫಿಕ್ಹ್' ಅನುಷ್ಠಾನದಲ್ಲಿದೆಯಾದರೆ ಇನ್ನು ಕೆಲವೆಡೆ 'ಮಾಲಿಕಿ ಫಿಕ್ಹ್' ಇದೆ. ಮತ್ತು ಕೆಲವು ರಾಷ್ಟ್ರಗಳಲ್ಲಿ 'ಹನಫೀ ಫಿಕ್ಹ್' ಅಥವಾ 'ಶಾಫಈ ಫಿಕ್ಹ್' ಕೂಡಾ ಇದೆ. ಸೌದಿ ಅರೇಬಿಯಾದಲ್ಲಿ 'ಹಂಬಲೀ ಫಿಕ್ಹ್'ಗೆ ಕಾನೂನಿನ ಸ್ಥಾನಮಾನ ಪ್ರಾಪ್ತವಿದೆಯಲ್ಲದೆ ಪ್ರತಿಯೊಂದು ಕಾನೂನು ನಿರ್ಮಾಣವೂ ಕುರ್‌ಆನ್, ಸುನ್ನತ್(ಪ್ರವಾದಿಚರ್ಯೆ) ಮತ್ತು ಸಹಾಬಿ(ರ)ಗಳ ಮಾದರಿಯನ್ನು ಮುಂದಿಟ್ಟು ಕೊಂಡೇ ನಡೆಯಬೇಕು ಎಂಬ ಸಂವಿಧಾನಿಕ ನಿರ್ಬಂಧವೂ ಅಲ್ಲಿದೆ. ಯಮನ್‌ನಲ್ಲಿ 'ಝೈದೀ ಫಿಕ್ಹ್' ಅನುಷ್ಠಾನದಲ್ಲಿದೆ. ದಕ್ಷಿಣ ಯಮನ್‌ನಲ್ಲಿ ಶಾಫಈ ಅಥವಾ ಹನಫೀ ಫಿಕ್ಹ್‌ಗಳನ್ನು ಅನುಸರಿಸಲಾಗುತ್ತದೆ. ಬಹರೈನ್‌ನಲ್ಲಿ ಮಾಲಿಕೀ, ಶಾಫಈ ಮತ್ತು ಶಿಯಾ ಫಿಕ್ಹ್‌ಗಳನ್ನು ಆಯಾ ವಿಭಾಗಕ್ಕೆ ಸೇರಿದ ಜನರ ಮೇಲೆ ಅನುಷ್ಠಾನಿಸಲಾಗುತ್ತದೆ. ಕುವೈಟಿನಲ್ಲಿ ಇಸ್ಲಾಮಿನ ಕೌಟುಂಬಿಕ ಕಾನೂನು ಜಾರಿಯಲ್ಲಿದೆ. ಅಲ್ಲದೆ ಸಾಮಾನ್ಯವಾಗಿ ಅಲ್ಲಿ 'ಮಾಲಿಕಿ ಫಿಕ್ಹ್' ಆಚರಣೆಯಲ್ಲಿದೆ.★

ಅಫಘಾನಿಸ್ತಾನದ ಸಂವಿಧಾನದ ಪ್ರಕಾರ ಇಸ್ಲಾಮ್ ಅಲ್ಲಿಯ ಸರಕಾರಿ ಧರ್ಮವಾಗಿದ್ದು ಎಲ್ಲ ಧಾರ್ಮಿಕ ವಿಷಯಗಳನ್ನೂ 'ಹನಫೀ ಫಿಕ್ಹ್'ನ ಪ್ರಕಾರವೇ ನೋಡಿಕೊಳ್ಳಲಾಗುತ್ತದೆ. ಈ ಇಸ್ಲಾಮೀ ನಿಯಮಗಳಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಮಾಲ್ದೀವನಲ್ಲಿ 'ಶಾಫಈ ಫಿಕ್ಹ್'ನ ಕೌಟುಂಬಿಕ ನಿಯಮ ಅನುಷ್ಠಾನದಲ್ಲಿದೆ. ಆಫ್ರಿಕದ ಚಾಡ್, ಗಾಂಬಿಯಾ, ಗಿನಿ, ಮಾಲಿ, ಮೊರಿಟಾನಿಯಾ, ನೈಜೀರಿಯಾ, ಸೆನೆಗಾಲ್ ಮತ್ತು ಸೋಮಾಲಿಯಗಳಲ್ಲಿ ಕೌಟುಂಬಿಕ ಕಾನೂನುಗಳ 'ಮಾಲಿಕೀ ಫಿಕ್ಹ್'ಗೆ ಕೌಟುಂಬಿಕ ಮತ್ತು ವಾರೀಸು ನಿಯಮದ ಸ್ಥಾನಮಾನ ಪ್ರಾಪ್ತವಿದೆ.

★ (Family Law reform in the Muslim world by Thair Mahamood P:3)

ಕುಟುಂಬ ಕಾನೂನುಗಳಲ್ಲಿ 'ಸುಧಾರಣೆ' ಮಾಡಿರುವ ಮುಸ್ಲಿಮ್ ರಾಷ್ಟ್ರಗಳಲ್ಲೂ ಸುಧಾರಣೆ ಆಗಿರುವುದು ಯಾವ ರೂಪದಲ್ಲಿ ಎಂದರೆ, ಒಂದೋ ವಿವಿಧ ಕರ್ಮಶಾಸ್ತ್ರ ಸಂಬಂಧಿತ ಅಭಿಪ್ರಾಯಗಳ ಪೈಕಿ ಯಾವುದಾದರೊಂದಕ್ಕೆ ಕಾನೂನಿನ ರೂಪ ಕೊಡಲಾಯಿತು ಅಥವಾ ಕೆಲವು ಆಂಶಿಕ ವಿವರಣೆಗಳಿಗೆ ಮೂಲ ನಿಯಮದ ಸ್ಥಾನಮಾನ ಕೊಡಲಾಯಿತು. ಆ ಪೈಕಿ ಹೆಚ್ಚಿನವು ಕೇವಲ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಾಗಿವೆ. ಈವರೆಗೆ ಲೋಕದ ಎರಡು ರಾಷ್ಟ್ರಗಳಲ್ಲಿ ಮಾತ್ರ ಇಸ್ಲಾಮಿನ ಕುಟುಂಬ ಕಾನೂನುಗಳನ್ನು ರದ್ದುಗೊಳಿಸಿ ಜಾತ್ಯತೀತ ಸ್ವರೂಪದ ಪೌರ ನಿಯಮ(Civil Code)ವನ್ನು ಜಾರಿಗೊಳಿಸುವ ಧೈರ್ಯ ತೋರಲಾಗಿದೆ. ಟರ್ಕಿ ಮತ್ತು ಅಲ್ಬೇನಿಯಗಳೇ ಆ ಎರಡು ರಾಷ್ಟ್ರಗಳು. ಟರ್ಕಿಯಲ್ಲಿ ಈ ಬದಲಾವಣೆಯನ್ನು 1927ರಲ್ಲಿ ತರಲಾಯಿತು. ಆಗ ಅಲ್ಲಿಯ ಇಸ್ಲಾಮೀ ಕುಟುಂಬ ನಿಯಮ ಮತ್ತು ವಾರೀಸು ಕಾನೂನುಗಳನ್ನು ತ್ಯಜಿಸಿ ಸ್ವಿಟ್ಸರ್ಲೆಂಡಿನ ಪೌರ ನಿಯಮವನ್ನು ಜಾರಿಗೊಳಿಸಲಾಯಿತು.

ಆದರೆ ಮುಸ್ತಫಾ ಕಮಾಲ್‌ನ ಆ ಅಧಿಕಾರಾವಧಿಯಲ್ಲಿ ಇಸ್ಲಾಮನ್ನು ಎಷ್ಟು ವಿಕೃತಿಗೊಳಪಡಿಸಲಾಯಿತು ಹಾಗೂ ದೇಶವನ್ನು ಧರ್ಮರಹಿತ ಬುನಾದಿಯಲ್ಲಿ ಕಟ್ಟಲಿಕ್ಕಾಗಿ ಜನತೆಯ ಮೇಲೆ ಎಂಥ ಅಮಾನುಷ ಕ್ರೌರ್ಯ ಮತ್ತು ದೌರ್ಜನ್ಯಗಳನ್ನು ಎಸಗಲಾಯಿತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಆತನ ಆಧುನಿಕ ಪ್ರಿಯತೆ ಎಷ್ಟು ವಿಪರೀತಕ್ಕೆ ಹೋಗಿತ್ತೆಂದರೆ ಅರಬೀ ಭಾಷೆಯಲ್ಲಿ ಅದಾನ್ ಕೊಡುವುದಕ್ಕೂ ನಿಷೇಧ ಹೇರಲಾಗಿತ್ತು. ಆದ್ದರಿಂದ ಇಂತಹ ಒಂದು ರಾಷ್ಟ್ರವನ್ನು ಮುಸ್ಲಿಮ್ ಪರ್ಸನಲ್ ಲಾ ದಲ್ಲಿ ಬದಲಾವಣೆ ಮಾಡಲು ಮಾದರಿಯಾಗಿ ಮುಂದಿಡುವುದರಲ್ಲಿ ಹುರುಳಿಲ್ಲ, ಇಲ್ಲಿ ಇನ್ನೊಂದು ಮಹತ್ವದ ವಾಸ್ತವಿಕತೆಯೂ ಗಮನದಲ್ಲಿರಬೇಕು. ಅದೇನೆಂದರೆ ಲೋಕದ ಯಾವುದೇ ಮುಸ್ಲಿಮ್ ರಾಷ್ಟ್ರವು ಶರೀಅತ್‌ನ ಇಂಗಿತಕ್ಕೆ ವಿರುದ್ಧವಾಗಿ ತನ್ನಲ್ಲಿನ ನಿಯಮಗಳಲ್ಲಿ ಏನಾದರೂ ಬದಲಾವಣೆ ಮಾಡಿಸಿದರೆ ಅಥವಾ ಅದನ್ನು ಕಿತ್ತು ಬೇರೆ ನಿಯಮವನ್ನು ಸ್ಥಾಪಿಸ ಬಯಸಿದರೆ ಹಾಗೆ ಮಾಡಲು ಆ ರಾಷ್ಟ್ರಕ್ಕೆ ಯಾವುದೇ ಅಧಿಕಾರವಿಲ್ಲ, ಒಂದು ವೇಳೆ ಇಂಥ ತಪ್ಪನ್ನು ಅದು ಮಾಡಿದರೂ ಆ ತಪ್ಪು ಲೋಕದ ಇತರ ಮುಸ್ಲಿಮರ ಪಾಲಿಗೆ ಅನುಕರಣೀಯವಾಗುವುದಿಲ್ಲ, ಇನ್ನು ಟರ್ಕಿಯನ್ನು ಉದಾಹರಿಸುವ ಜನರು, ಇಸ್ಲಾಮೀ ನಿಯಮಗಳಲ್ಲಿ ಕಿಂಚಿತ್ತೂ ಬದಲಾವಣೆ ಮಾಡದೇ ಇರುವ ಇತರ ಇಸ್ಲಾಮೀ ರಾಷ್ಟ್ರಗಳನ್ನು ಯಾಕೆ ಪ್ರಸ್ತಾಪಿಸುವುದಿಲ್ಲ? ನಾವು ಈಗಾಗಲೇ ಅಂತಹ ರಾಷ್ಟ್ರಗಳನ್ನು ಹೆಸರಿಸಿದ್ದು ಅವುಗಳ ಸಂಖ್ಯೆ ಒಂದೆರಡೇನೂ ಅಲ್ಲ, ಬಹಳಷ್ಟಿದೆ.

ಇಸ್ಲಾಮಿನ ಕುಟುಂಬ ನಿಯಮ ಹಾಗೂ ಆಸ್ತಿ ಕಾನೂನನ್ನು ಕೊನೆಗೊಳಿಸಲು ಈ ವರೆಗೆ ಇಸ್ರೇಲಿನಂತಹ ರಾಷ್ಟ್ರವೂ ಧೈರ್ಯ ಮಾಡಿಲ್ಲ, 1917ರಲ್ಲಿ ಟರ್ಕಿಯವರು ಶರೀಅತ್‌ನ ಆಧಾರದಲ್ಲೇ ಒಂದು ಕುಟುಂಬ ನಿಯಮ(Ottoman Law Family Rights, 1917) ವನ್ನೂ ರಚಿಸಿದ್ದರು. ಇದು ಟರ್ಕಿಯಲ್ಲಿ 1926ರಲ್ಲೇ ಕೊನೆಗೊಂಡಿದ್ದರೂ ಇಸ್ರೇಲಿನಲ್ಲಿ ಮುಸ್ಲಿಮರ ಮೇಲೆ ಈಗಲೂ ಇದೇ ನಿಯಮ ಜಾರಿಯಲ್ಲಿದೆ.

ಕೆಲವರು ಬಹಳ ಉತ್ಸಾಹದಿಂದ ಪಾಕಿಸ್ತಾನದ ಉದಾಹರಣೆ ಕೊಡುವುದಿದೆ. ಆದರೆ ವಾಸ್ತವದಲ್ಲಿ ಪಾಕಿಸ್ತಾನದಲ್ಲಿ ಈಗಲೂ ಮುಸ್ಲಿಮ್ ವ್ಯಕ್ತಿ ನಿಯಮವೇ ಅನುಷ್ಠಾನದಲ್ಲಿದಯೇ ವಿನಾ ಯಾವುದೇ ಜಾತ್ಯತೀತ ನಿಯಮ ಅಲ್ಲಿಲ್ಲ. ಇನ್ನು 1961ರಲ್ಲಿ ಮುಸ್ಲಿಮ್ ಕುಟುಂಬ ನಿಯಮ ಅಧ್ಯಾದೇಶ(Muslim Family Law Ordinance) ಮೂಲಕ ಕೆಲವು ಸುಧಾರಣೆಗಳನ್ನು ಮಾಡಲಾಗಿತ್ತು. ಆದರೆ ಈ ಸುಧಾರಣೆಗಳು ಕೂಡಾ ಹೆಚ್ಚಾಗಿ ಆಡಳಿತಕ್ಕೆ ಸಂಬಂಧಿಸಿದ್ದು ಅಥವಾ ಕೆಲವು ಅಂಶಗಳಿಗೆ ಅಧಿಕೃತ ಕಾನೂನಿನ ರೂಪ ಕೊಡುವುದಕ್ಕೆ ಸೀಮಿತವಾದುದು. ಈ ಸುಧಾರಣೆಗಳು ಎಷ್ಟು ಆಂಶಿಕವಾಗಿದ್ದುವೆಂಬುದು ಆ ಪೈಕಿ ಕೆಲವನ್ನು ನೋಡಿದರೆ ತಿಳಿಯುತ್ತದೆ. ಉದಾ: 1)ಪ್ರತಿಯೊಂದು ವಿವಾಹವನ್ನು ಸರಕಾರೀ ಕಚೇರಿಯಲ್ಲಿ ದಾಖಲುಗೊಳಿಸಬೇಕು. ಒಂದು ವೇಳೆ ಇದರಲ್ಲಿ ತಪ್ಪಿದರೆ ವಿವಾಹವೇನೂ ಅಸಿಂಧುವಾಗುವುದಿಲ್ಲ, ಆದರೆ ಕೆಲವು ದಂಡನೆಗಳನ್ನು ಮಾತ್ರ ಸಂಬಂಧಿತರು ಎದುರಿಸಬೇಕಾಗುತ್ತದೆ. 2) ಒಬ್ಬ ಪತ್ನಿಯ ಉಪಸ್ಥಿತಿಯಲ್ಲಿ ಇನ್ನೊಂದು ವಿವಾಹವಾಗಬೇಕಾದರೆ ಆರ್ಬಿಟ್ರೇಶನ್ ಕೌನ್ಸಿಲ್‌ನಿಂದ ಅನುಮತಿ ಪಡೆಯಬೇಕು. ಆದರೆ ಇದರಲ್ಲಿ ತಪ್ಪಿದರೆ ಕೆಲವು ಶಿಕ್ಷೆಗಳಿವೆಯೇ ವಿನಾ ಮರು ವಿವಾಹವನ್ನು ಅಲ್ಲಿ ನಿಷೇಧಿಸಲಾಗಿಲ್ಲ. ಅರ್ಥಾತ್ ಅಲ್ಲಿ ಬಹುಪತ್ನಿತ್ವಕ್ಕೆ ನಿಷೇಧವಂತೂ ಸರ್ವಥಾ ಇಲ್ಲವೆಂದಾಯಿತು. 3) ವಿವಾಹ ವಿಚ್ಛೇದನದ ಬಗ್ಗೆ ಪುರುಷನು ಕಡ್ಡಾಯವಾಗಿ ಆರ್ಬಿಟ್ರೇಶನ್ ಕೌನ್ಸಿಲ್‌ಗೆ ತಿಳಿಸಬೇಕು. ಈ ಸಮಿತಿಯು ಪತಿ-ಪತ್ನಿಯರ ಮಧ್ಯೆ ಸಂಬಂಧ ಮರುಸ್ಥಾಪನೆಗೆ ಪ್ರಯತ್ನಿಸುವುದು. ಇಲ್ಲಿ ಕೂಡಾ ಪುರುಷನಿಂದ ಅವನ ವಿಚ್ಛೇದನ ಹಕ್ಕನ್ನು ಕಿತ್ತುಕೊಳ್ಳಲಾಗಿಲ್ಲ. ಸೌಹಾರ್ದ ಸ್ಥಾಪನೆಗೆ ಯತ್ನಿಸುವ ಒಂದು ಅವಕಾಶವನ್ನು ಮಾತ್ರ ಕಲ್ಪಿಸಿಕೊಡಲಾಗಿದೆ. ಈ 'ಸುಧಾರಣೆ' ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ್ದಾಗಿದೆ. ಅಂದರೆ ತಬ್ಬಲಿ ಮೊಮ್ಮಗ ಮತ್ತು ಮೊಮ್ಮಗಳಿಗೆ, ಅವರ ತಂದೆ ಜೀವಂತವಿದ್ದಿದ್ದರೆ ಅವರ ತಾತನ ಆಸ್ತಿಯಲ್ಲಿ ಎಷ್ಟು ಹಕ್ಕು ಸಿಗುತ್ತಿತ್ತೋ ಅಷ್ಟನ್ನು ಕೊಡಲಾಗುವುದು ಎಂದು ತೀರ್ಮಾನಿಸಲಾಯಿತು. ಈ ಎಲ್ಲ ಸುಧಾರಣೆಗಳ ಸಿಂಧುತ್ವವನ್ನು ಶರೀಅತ್ ದೃಷ್ಟಿಕೋನದಿಂದ ಪ್ರಶ್ನಿಸಬಹುದು. ಆದರೆ ಒಂದು ಸಂಗತಿಯಂತೂ ಬಹಳ ಸ್ಪಷ್ಟವಿದೆ. ಪಾಕಿಸ್ತಾನದಲ್ಲಿ ಮುಸ್ಲಿಮ್ ವ್ಯಕ್ತಿ ನಿಯಮದ ರದ್ದತಿಯೋ ಅದರ ಸ್ಥಾನದಲ್ಲಿ ಇನ್ನೊಂದು ಜಾತ್ಯತೀತ ನಿಯಮದ ಸ್ಥಾಪನೆಯೋ ಖಂಡಿತ ನಡೆದಿಲ್ಲ ಅಥವಾ ಮುಸ್ಲಿಮ್ ಪರ್ಸನಲ್ ಲಾದಲ್ಲೂ ಯಾವುದೇ ಗಣನೀಯ ಬದಲಾವಣೆ ಆದುದಿಲ್ಲ.

ಈ ವೇಳೆ ಇನ್ನೊಂದು ವಿಷಯವೂ ಸ್ಮರಣೀಯ. ಪಾಕಿಸ್ತಾನದ ವಿದ್ವಾಂಸರು ಈ 'ಸುಧಾರಣೆ'ಗಳನ್ನು ಉಗ್ರವಾಗಿ ಖಂಡಿಸಿದ್ದರಲ್ಲದೆ ಜನರೂ ಇದನ್ನು ಪ್ರತಿಭಟಿಸಿದರು. ಆದರೆ ಅಲ್ಲಿನ ಸರ್ವಾಧಿಕಾರೀ ಸರಕಾರವು ಜನರ ಬಹುಮತಾಭಿಪ್ರಾಯವನ್ನು ತುಳಿದು ತನ್ನದೇ ಹಠವನ್ನು ಪೂರ್ತಿಗೊಳಿಸಿತು. ಅಂಥ ಸರ್ವಾಧಿಕಾರೀ ಸರಕಾರದ ಒಂದು ಸರ್ವಾಧಿಕಾರೀ ಕ್ರಮ ನಮ್ಮಂತಹ ಪ್ರಜಾಸತ್ತಾತ್ಮಕ ರಾಷ್ಟ್ರದವರಿಗೆ ಮಾದರಿಯಾಗಲು ಸಾಧ್ಯವೇ?

ಇಲ್ಲಿ ಇನ್ನೊಂದು ಅತ್ಯಂತ ಗಮನಾರ್ಹವಾದ ಅಂಶವೂ ಅಡಗಿದೆ. ಪಾಕ್ ಸರಕಾರವು ಬದಲಾವಣೆ ಮಾಡಿರುವುದು ತನ್ನ ದೇಶದಲ್ಲಿ ಬಹುಸಂಖ್ಯಾತರಾಗಿರುವ ಮುಸ್ಲಿಮರ

'ಪರ್ಸನಲ್ ಲಾ'ದಲ್ಲಿ ಎಂಬುದನ್ನು ತಿಳಿದಿರಬೇಕು. ಪಾಕ್ ಸರಕಾರ ಈವರೆಗೆ ತನ್ನಲ್ಲಿನ ಅಲ್ಪ ಸಂಖ್ಯಾತರ ನಿಯಮಗಳಲ್ಲಿ ಯಾವುದೇ ಬದಲಾವಣೆ ಮಾಡಿದ್ದಿಲ್ಲ. ಹಾಗಿದ್ದರೆ ಪಾಕಿಸ್ತಾನದಲ್ಲಿ ಬಹುಸಂಖ್ಯಾತ ಮುಸ್ಲಿಮರ ಕಾನೂನಿನಲ್ಲಿ ಮಾಡಲಾದ ಬದಲಾವಣೆ, ಭಾರತದ ಅಲ್ಪಸಂಖ್ಯಾತ ಮುಸಲ್ಮಾನರ ಕಾನೂನನ್ನು ಬದಲಾಯಿಸುವುದಕ್ಕೆ ಆಧಾರವಾಗಲು ಸಾಧ್ಯವೇ?

ಸಮಾನ ಪೌರ ನಿಯಮದ ರೂಪರೇಷೆಗಳು

ಒಂದು ವೇಳೆ ಸರಕಾರವು ಸಮಾನ ಪೌರ ನಿಯಮ(Uniform Civil Code)ವನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರೆ ಆಗ ಅದರ ವ್ಯಾಪ್ತಿಯು ಕೇವಲ ಬಹುಪತ್ನಿತ್ವದ ನಿಷೇಧಕ್ಕೆ ಸೀಮಿತವಾಗಿ ಉಳಿಯುವುದಿಲ್ಲ. ವಿವಾಹ, ವಿಚ್ಛೇದನ, ಬಿಡುಗಡೆ, ಆಸ್ತಿ ಹಂಚಿಕೆ, ಇತ್ಯಾದಿ ಎಲ್ಲ ವಿಷಯಗಳಿಗೂ ಇದು ವಿಸ್ತರಿಸುತ್ತದೆ. ಈ ಎಲ್ಲ ವಿಷಯಗಳ ಬಗ್ಗೆ ಮಾಡಲಾಗುವ ನಿಯಮಗಳು ಹಿಂದೂ-ಮುಸ್ಲಿಮ್-ಕ್ರೈಸ್ತ ಎಂಬ ವ್ಯತ್ಯಾಸವಿಲ್ಲದೆ ಎಲ್ಲರ ಮೇಲೂ ಸಮಾನವಾಗಿ ಜಾರಿಯಾಗುತ್ತದೆ. ಶಾಸನ ರಚನೆಯು ಎಲ್ಲ ಧಾರ್ಮಿಕ ಬಂಧನಗಳಿಂದಲೂ ಮುಕ್ತವಾಗಿರುತ್ತದೆ. ಆದ್ದರಿಂದ ಆ ನಿಯಮಗಳು ಕೇವಲ ಮುಸ್ಲಿಮ್ ವಿದ್ವಾಂಸರ ತೀರ್ಪುಗಳು ಮತ್ತು ಅಭಿಪ್ರಾಯಗಳಿಗೆ ಮಾತ್ರ ವಿರೋಧವಾಗಿರುವುದಲ್ಲ. ಬದಲಾಗಿ ಅವು ಮೂಲತಃ ಪವಿತ್ರ ಕುರ್‌ಆನ್ ಮತ್ತು ಹದೀಸಿನ ಸ್ಪಷ್ಟ ಆದೇಶಗಳಿಗೇ ಬದ್ಧ ವಿರುದ್ಧವಾಗಿರುತ್ತದೆ.

ಸಮಾನ ಪೌರ ನಿಯಮದಲ್ಲಿ ಎಂತೆಂತಹ ನೀತಿ ನಿಯಮಗಳು ಇರುತ್ತವೆ. ಎಂಬುದು ಅದನ್ನು ನಿರ್ಮಿಸುವ ದುರ್ದಿನದಂದೇ ಬಹಿರಂಗವಾದೀತು. ಆದರೂ ಅದರ ರೂಪುರೇಷಗಳು ಈಗಲೂ ಹೆಚ್ಚೇನೂ ಅನಿಶ್ಚಿತ ಅಥವಾ ಗುಪ್ತವಾಗಿ ಉಳಿದಿಲ್ಲ. ಏಕೆಂದರೆ ಪಾರ್ಲಿಮೆಂಟಿನಲ್ಲಿ ಇರುವಂತೆ ಇಲ್ಲೂ ಕಾನೂನು ರಚನೆಯ ಬುನಾದಿಯು ಬಹುಮತಾಭಿಪ್ರಾಯವೇ ಆಗಿರುತ್ತದೆ. ಈ ರೀತಿ ಯಥಾರ್ಥದಲ್ಲಿ ಕೊನೆಗೂ ದೇಶದ ಬಹುಸಂಖ್ಯಾತ ವರ್ಗವೇ ಇದನ್ನು ನಿರ್ಮಿಸಿದಂತಾಗುತ್ತದೆ. ಈ ಬಹುಸಂಖ್ಯಾತ ವರ್ಗವು ಪಾಶ್ಚಿಮಾತ್ಯ ಸಂಸ್ಕೃತಿಯ ಮಾದರಿಯಲ್ಲೇ ಎಲ್ಲವನ್ನೂ ಕಾಣಬಯಸುತ್ತಿರುವ ಸಂಗತಿ ರಹಸ್ಯವೇನೂ ಅಲ್ಲ. ಉದಾ: ಬಹುಪತ್ನಿತ್ವವನ್ನು ನಿಷೇಧಿಸಬೇಕು. ವಿಚ್ಛೇದನದ ಹಕ್ಕನ್ನು ಪುರುಷನ ಬದಲು ನ್ಯಾಯಾಲಯಕ್ಕೆ ಕೊಡಬೇಕು. ವಾರೀಸು ಆಸ್ತಿಯಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಪಾಲು ಕೊಡಬೇಕು. ...... ಇತ್ಯಾದಿ. ಇದೇ ಬಹುಸಂಖ್ಯಾತ ವರ್ಗವು ಕೆಲವು ವರ್ಷಗಳ ಹಿಂದೆ ಹಿಂದೂ ಕೋಡ್ ಬಿಲ್(Hindu Code Bill) ಅನ್ನು ಮಂಜೂರು ಮಾಡಿದ್ದು ಅದೀಗ ಹಿಂದೂ ವಿವಾಹ ಕಾಯಿದೆ(Hindu Marriage Act) ಮತ್ತು ಸಕ್ಸೆಶನ್ ಆಕ್ಟ್(Hindu Succession Act)ಗಳ ರೂಪದಲ್ಲಿ ಅನುಷ್ಠಾನದಲ್ಲಿದೆ. ಈ ಕಾನೂನುಗಳಲ್ಲಿ ಅವರ ಮನೋಗತಿಯು ಬಹಳ ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಆದ್ದರಿಂದ ಯೋಜಿತ 'ಸಮಾನ ಪೌರ ನಿಯಮ'ವು ಪ್ರಸ್ತುತ ಹಿಂದೂ

ಕೋಡ್‌ಗೆ ಬಹುತೇಕ ಹೋಲುತ್ತದೆಂದರೂ ತಪ್ಪಾಗಲಾರದು. ಲಂಡನ್ ವಿಶ್ವವಿದ್ಯಾಲಯದಲ್ಲಿ ಓರಿಯೆಂಟಲ್ ಲಾ ದ ಪ್ರೊಫೆಸರ್ ಆಗಿದ್ದ ಜೆ. ಡಂಕನ್ ಅವರು ಭಾರತೀಯ ಪೌರ ನಿಯಮದ ಬಗ್ಗೆ ಹೇಳಿರುವ ಮಾತುಗಳಲ್ಲಿ ಇದರ ಸಮರ್ಥನೆ ಇದೆ.

The civil code promised in Article 44 of the constitution is like the Hindu code of which we have spoken before, a misnomer, but a convenient one.(Religion Law and the state in India by J Dunken P.546)

ಸಂವಿಧಾನದ 44ನೇ ವಿಧಿಯಲ್ಲಿ ಹೇಳಲಾಗಿರುವ 'ಸಿವಿಲ್ ಕೋಡ್' ನಾವು ಈಗಾಗಲೇ ಪ್ರಸ್ತಾಪಿಸಿರುವ ಹಿಂದೂ ಕೋಡ್‌ನಂತೆಯೇ ಇರುವುದು. ಈ ಹೆಸರು ಸ್ವಲ್ಪ ಗೊಂದಲ ಹುಟ್ಟಿಸಿದರೂ ಇದುವೇ ಸೂಕ್ತವಾಗಿದೆ.

ಬಹುಸಂಖ್ಯಾತ ವರ್ಗದ ಈ ಮನೋಭಾವ ತಿಳಿದಿದ್ದೂ ಅದು ಸಮಾನ ಪೌರ ನಿಯಮದ ರಚನೆಯ ವೇಳೆ ರಿಯಾಯಿತಿ ತೋರಬಹುದೆಂದು ಹೇಗೆ ತಾನೇ ನಿರ್ಲಕ್ಷಿಸಲು ಸಾಧ್ಯ? ಆಂಶಿಕ ಹಾಗೂ ನಿರ್ಲಕ್ಷಿಸುವಿಕೆಯ ಕೆಲವು ಅಪವಾದಗಳನ್ನು ಬಿಟ್ಟರೆ ಮೂಲತಃ ಇವರ ತೀರ್ಮಾನವು ಹಿಂದೂ ಕೋಡ್ ಬಿಲ್‌ನ ರೂಪದಲ್ಲೇ ಇರುತ್ತದೆ. ಇನ್ನೊಂದು ಅರ್ಥದಲ್ಲಿ ಈ ಮೂಲಕ ಅವರು ಅಲ್ಪಸ್ವಲ್ಪ ಬದಲಾವಣೆ ಮಾಡಿ ಹಿಂದೂ ಕೋಡ್‌ಗೆ ಸಮಾನ ಸಿವಿಲ್ ಕೋಡ್‌ನ ರೂಪ ಕೊಡುವುದು. ಈ ಹಿನ್ನೆಲೆಯಲ್ಲಿ ನಾವು ಹಿಂದೂ ಕೋಡನ್ನು ಪರಿಶೀಲಿಸಿ ಅದು ಮುಸ್ಲಿಮ್ ಪರ್ಸನಲ್ ಲಾ ಗಿಂತ ಎಷ್ಟು ಭಿನ್ನವಾಗಿದೆ ಎಂಬುದನ್ನು ನೋಡೋಣ.

ಸಾಮಾನ್ಯವಾಗಿ ಹಿಂದೂ ಕೋಡ್ ಎಂದು ಕರೆಯಲ್ಪಡುವ 1955ರ ಹಿಂದೂ ವಿವಾಹ ಕಾಯಿದೆಯ ಪ್ರಕಾರ ಒಬ್ಬ ಪತ್ನಿಯ ಉಪಸ್ಥಿತಿಯಲ್ಲಿ ಪತಿಯು ಇನ್ನೊಂದು ವಿವಾಹ ಮಾಡುವಂತಿಲ್ಲ.* ಪ್ರಸ್ತುತ ನಿಯಮಕ್ಕೆ ವಿರುದ್ಧವಾಗಿ ದ್ವಿತೀಯ ವಿವಾಹ ನಡೆಸಿದಲ್ಲಿ ಇಂಡಿಯನ್ ಪೆನಲ್ ಕೋಡ್ ಪ್ರಕಾರ 7 ವರ್ಷಗಳ ಕಾರಾಗೃಹವಾಸದ ಸಜೆ ಕೊಡುವುದು! ಆದರೆ ಇಸ್ಲಾಮಿನಲ್ಲಿ ನ್ಯಾಯಪಾಲನೆಯ ನಿಬಂಧನೆಯೊಂದಿಗೆ, 4 ಪತ್ನಿಯರನ್ನಿರಿಸುವ ಅಧಿಕಾರವಿದೆ. ಈ ಅಧಿಕಾರವನ್ನು ವಿವಿಧ ಅವಶ್ಯಕತೆಗಳು ಮತ್ತು ಹಿತಾಸಕ್ತಿಗಳ ಹಿನ್ನಲೆಯಲ್ಲಿ ನೀಡಲಾಗಿದೆ. ಅದೆಷ್ಟೋ ಸಲ ದ್ವಿತೀಯ ವಿವಾಹ ಅನಿವಾರ್ಯವಾಗುವಂತಹ ಪ್ರಸಂಗಗಳಿರುತ್ತವೆ. ಒಬ್ಬ ಪತ್ನಿ ಸದಾ ರೋಗಿಯಾಗಿದ್ದರೆ ಅಥವಾ ಬಂಜೆಯಾಗಿದ್ದರೆ ಆಕೆಯ ಪತಿಗೆ ಎರಡು ದಾರಿಗಳು ಮಾತ್ರ ಉಳಿಯುತ್ತವೆ.

1. ಅವನು ಆಕೆಯನ್ನು ವಿಚ್ಛೇದಿಸಿ ಬೇರೆ ವಿವಾಹವಾಗಬೇಕು. 2. ಆಕೆಯನ್ನು ತನ್ನ ಜತೆ ಇಟ್ಟುಕೊಂಡೇ ಇನ್ನೊಬ್ಬಾಕೆಯನ್ನು ವಿವಾಹವಾಗಬೇಕು. ಮೊದಲನೆಯದಕ್ಕಿಂತ ಎರಡನೆಯದೇ

★ Any Marriage between two Hindus solemnized after commencement of this act is void, if at the date of such marriage either party had a husband of wife living and the provisions of sectionf 494 and 495 of Indian Penal Code shall apply accordingly.(Section 17)

ಹೆಚ್ಚು ಉತ್ತಮ ಮಾರ್ಗ ತಾನೇ? ಒಂದು ವೇಳೆ ಬಹುಪತ್ನಿತ್ವವನ್ನು ನಿಷೇಧಿಸಿದರೆ ಆಗಂತೂ ಜನರು ಮೊದಲನೆಯ ಮಾರ್ಗವನ್ನೇ ಅನುಸರಿಸಲು ನಿರ್ಬಂಧಿತರಾಗುತ್ತಾರೆ. ಇದು ಸ್ತ್ರೀಯರ ಪಾಲಿಗೆ ಉತ್ತಮವೇ?

ವಿಧವೆಯರ ಸಮಸ್ಯೆಯನ್ನು ನಿವಾರಿಸುವ ದೃಷ್ಟಿಯಿಂದಲೂ ಬಹುಪತ್ನಿತ್ವದ ಅವಕಾಶ ವನ್ನು ಕಲ್ಪಿಸಿಕೊಡುವುದು ಅವಶ್ಯಕ. ಸಂಪೂರ್ಣವಾಗಿ ದೇವಭಕ್ತಿ ಮತ್ತು ನೈತಿಕತೆಯಲ್ಲಿ ಆಧರಿತವಾಗಿರುವ ಇಸ್ಲಾಮ್ ಧರ್ಮವು ಪುರುಷನನ್ನು ಅನೈತಿಕತೆಯಿಂದ ದೂರವಿರಿಸುವುದ ಕ್ಕಾಗಿಯೇ ಬಹುಪತ್ನಿತ್ವವನ್ನು ಅನುಮತಿಸಿದೆ. ಈ ಧರ್ಮಬದ್ಧ ಮಾರ್ಗವನ್ನು ಮುಚ್ಚಿದರೆ ಅಧರ್ಮ ಮತ್ತು ಅನೈತಿಕತೆಯ ಬಾಗಿಲುಗಳನ್ನು ತೆರೆದಂತೆಯೇ ಆಗುತ್ತದೆ. ಪಾಶ್ಚಿಮಾತ್ಯ ಸಂಸ್ಕೃತಿಯು ಇಂಥದೇ ಅವಸ್ಥೆಯೊಂದನ್ನು ಸೃಷ್ಟಿಸಿದೆ. ಅಲ್ಲೀಗ ಬಹುಪತ್ನಿತ್ವ ನಿಷೇಧಿಸಲ್ಪಟ್ಟಿದೆ. ಆದರೆ ಕಾನೂನು ಬಾಹಿರವಾಗಿ ಪುರುಷನು ಎಷ್ಟೇ ಸ್ತ್ರೀಯರನ್ನು ಇಟ್ಟುಕೊಂಡರೂ ಅದಕ್ಕೆ ಆಕ್ಷೇಪವಿಲ್ಲ. ಮಾತ್ರವಲ್ಲದೆ ಪಾಶ್ಚಿಮಾತ್ಯ ಸಂಸ್ಕೃತಿಯು ನೃತ್ಯವೇ ಮುಂತಾದ ಪ್ರಕ್ರಿಯೆಗಳನ್ನು ಕಲೆಯ ಹೆಸರಲ್ಲಿ ಪ್ರೋತ್ಸಾಹಿಸಿ ಲೈಂಗಿಕ ಅರಾಜಕತೆಯನ್ನು ಇನ್ನಷ್ಟು ಹುರಿದುಂಬಿಸಿದೆ. ಅಶ್ಲೀಲ ಪ್ರಚಾರವು ಆ ಸಮಾಜದ ಪುರುಷರ ಭಾವನೆಗಳನ್ನು ಎಷ್ಟು ಕೆರಳಿಸುತ್ತದೆಂದರೆ ಅವರಿಗೆ ಒಬ್ಬ ಸ್ತ್ರೀಯಲ್ಲಿ ತೃಪ್ತಿ ಸಿಗುವುದೇ ಇಲ್ಲ. ಆದರೆ ಇನ್ನೊಂದೆಡೆ ಇವರು ಏಕಪತ್ನಿತ್ವವನ್ನು ಕಾನೂನು ಮೂಲಕ ಜಾರಿಗೊಳಿಸಲು ತವಕಿಸುತ್ತಾರೆ! ಬಹುಪತ್ನಿತ್ವದ ಧರ್ಮಸಮ್ಮತ ಬಾಗಿಲನ್ನು ಮುಚ್ಚಿ ಬಿಡಲು ಈ ಪಾಶ್ಚಿಮಾತ್ಯ ಸಂಸ್ಕೃತಿಯ ರೂವಾರಿಗಳಿಗೆ ಅಧಿಕಾರ ಕೊಟ್ಟವರು ಯಾರು?

ತಲಾಕ್‌ನ ವಿಷಯದಲ್ಲೂ ಹಿಂದೂ ಕೋಡ್ ಇಸ್ಲಾಮೀ ನಿಯಮಗಳಿಗೆ ಸಂಪೂರ್ಣ ವಿರುದ್ಧವಾಗಿದೆ. ವಾಸ್ತವದಲ್ಲಿ ಹಿಂದೂ ಕೋಡ್ ಬಿಲ್ ಇಲ್ಲೂ ಪಾಶ್ಚಿಮಾತ್ಯ ಸಂಸ್ಕೃತಿಯ ರೂಪವನ್ನೇ ಅನುಕರಿಸಿದೆ. ಅದು ವಿಚ್ಛೇದನದ ಅಧಿಕಾರವನ್ನು ಪುರುಷನ ಬದಲು ನ್ಯಾಯಾಲಯಕ್ಕೆ ಕೊಟ್ಟಿದೆ. ಅಂದರೆ ಒಬ್ಬ ಪತಿ ತನ್ನ ಪತ್ನಿಯ ವಿಚ್ಛೇದನ ಬಯಸಿದರೆ ಅಥವಾ ಒಬ್ಬ ಪತ್ನಿ ತನ್ನ ಪತಿಯಿಂದ ಬಿಡುಗಡೆ ಪಡೆಯಲು ಬಯಸುವುದಾದರೆ ಅವರು ನ್ಯಾಯಾಲಯಕ್ಕೆ ಹೋಗಬೇಕು. ವಿಚ್ಛೇದನಕ್ಕೆ ಇರುವ ಕಾರಣವು ಹಿಂದೂ ಕೋಡ್‌ನಲ್ಲಿ ಪ್ರಸ್ತಾಪಿತವಾಗಿರುವಂತಹ ಯಾವುದಾದರೂ ಕಾರಣವೇ ಆಗಿದ್ದರೆ ಮಾತ್ರ ನ್ಯಾಯಾಲಯವು ಆ ಆಧಾರದಲ್ಲಿ ವಿಚ್ಛೇದನದ ಹಕ್ಕನ್ನು (Decree) ಕೊಡುತ್ತದೆ. ಇನ್ನು ಕಾರಣವೇನೇ ಇದ್ದರೂ ವಿವಾಹದ ಮೂರು ವರ್ಷಗಳೊಳಗೆ ಬರುವ ಯಾವುದೇ ವಿಚ್ಛೇದನ ಅಥವಾ ಬಿಡುಗಡೆಯ ಮನವಿಯನ್ನು ಪರಿಗಣಿಸುವುದೇ ಇಲ್ಲ.

ಇಸ್ಲಾಮ್ ಪುರುಷನಿಗೆ ವಿಚ್ಛೇದನ(ತಲಾಕ್) ನೀಡುವ ಹಾಗೂ ಮಹಿಳೆಗೆ ಬಿಡುಗಡೆ(ಖುಲಾ) ಪಡೆಯುವ ಅಧಿಕಾರಗಳನ್ನು ನೀಡಿದೆ. ಹಿಂದೂ ಕೋಡ್ ಈ ಎರಡೂ ಅಧಿಕಾರಗಳನ್ನು ನಿರಾಕರಿಸುತ್ತದೆ. ಅಂದರೆ ಪುರುಷನಿಗೆ ವಿಚ್ಛೇದನ ಕೊಡುವ ಹಕ್ಕಿಲ್ಲ. ಮಹಿಳೆಗೆ ಪತಿಯಿಂದ ಬಿಡುಗಡೆ ಪಡೆಯುವ ಅಧಿಕಾರವಿಲ್ಲ. ಇಬ್ಬರೂ ನ್ಯಾಯಾಲಯಕ್ಕೆ

ಹೋಗಲು ನಿರ್ಬಂಧಿತರು. ಇದರಲ್ಲಿ ಇರುವಂತಹ ದೌರ್ಬಲ್ಯ ವ್ಯಕ್ತ. ಸ್ತ್ರೀ ಪುರುಷರ ಪರಸ್ಪರ ವೈವಾಹಿಕ ವ್ಯವಹಾರಗಳನ್ನು ನ್ಯಾಯಾಲಯಕ್ಕೆ ಒಯ್ಯುವುದು ಅಸಮಂಜಸ. ಅದೇ ರೀತಿ ಅಲ್ಲಿ ಕಾನೂನು ರೀತಿಯ ಆರೋಪಗಳನ್ನು ಸಾಬೀತು ಮಾಡುವುದು ದುಸ್ತರ. ಆದರೆ ಈ ರೀತಿಯ ಕಾನೂನು ಕಟ್ಟುಪಾಡುಗಳ ಪರಿಣಾಮವೇನಾಗುತ್ತದೆಂದರೆ ಪುರುಷನು ವಿಚ್ಛೇದನದ ಗೊಡವೆಗೆ ಹೋಗುವ ಬದಲು ಪತ್ನಿಯನ್ನು ತ್ರಿಶಂಕು ಸ್ಥಿತಿಯಲ್ಲಿರಿಸಿ ಆಕೆ ಜೀವನವಿಡೀ ಬಳಲುವಂತೆ ಮಾಡುತ್ತಾನೆ. ಇಲ್ಲವೇ ಹೇಗಾದರೂ ಮಾಡಿ ಅವಳನ್ನು ತನ್ನಿಂದ ದೂರ ಮಾಡಲಿಕ್ಕಾಗಿ ನ್ಯಾಯಾಲಯದಲ್ಲಿ ಅವಳ ವಿರುದ್ಧ ಅತ್ಯಂತ ಕೀಳ್ಮಟ್ಟದ ಸುಳ್ಳಾರೋಪಗಳನ್ನು ಹೊರಿಸುತ್ತಾನೆ. ಇದೇ ರೀತಿ ಒಬ್ಬ ಮಹಿಳೆ ತಾನಿಚ್ಛಿಸದ ಪತಿಯಿಂದ ಬಿಡುಗಡೆ ಪಡೆಯಲು ಬಯಸಿದರೂ ಅವಳು 'ಖುಲಾ'ದಂತಹ ಸರಳ ಮಾರ್ಗವನ್ನು ಅನುಸರಿಸಲು ಸಾಧ್ಯವೇ ಇಲ್ಲ. ಆಕೆ ನ್ಯಾಯಾಲಯಕ್ಕೆ ಪ್ರದಕ್ಷಿಣೆ ಬರಬೇಕಾಗುತ್ತದೆ. ಒಂದು ವೇಳೆ ನ್ಯಾಯಾಲಯವು ಅವಳ ಮನವಿಯನ್ನು ತಿರಸ್ಕರಿಸಿದರೆ ಆಗ ತಾನು ಯಾವ ಪತಿಯಿಂದ ಬೇರ್ಪಡಲು ನ್ಯಾಯಾಲಯದ ಮೊರೆ ಹೊಕ್ಕಿದ್ದಳೋ ಅದೇ ಪತಿಯ ಜೊತೆ ನಿರ್ಬಂಧಿತಳಾಗುವ ಆ ಮಹಿಳೆಯ ಸ್ಥಿತಿ ಏನಾದೀತು? ಹೀಗೆ ದೂರಗಾಮೀ ಪರಿಣಾಮಗಳ ದೃಷ್ಟಿಯಿಂದ ನೋಡಿದರೆ, ವಿಚ್ಛೇದನದ ಹಕ್ಕನ್ನು ಪುರುಷನ ಕೈಯಿಂದ ಕಿತ್ತು ನ್ಯಾಯಾಲಯಕ್ಕೆ ಒಪ್ಪಿಸುವುದರಿಂದ ಮಹಿಳೆಯ ಪಾಲಿಗೆ ನಷ್ಟವಾದೀತೇ ವಿನಾ ಆಕೆಗೆ ಪ್ರಯೋಜನವೇನೂ ಆಗಲಾರದೆಂದು ಖಂಡಿತವಾಗಿ ಹೇಳಬಹುದು.

ಇಲ್ಲಿ ಇನ್ನೊಂದು ಪ್ರಾಮುಖ್ಯ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ವಿಚ್ಛೇದನದ ಅಧಿಕಾರವನ್ನು ಕಾನೂನು ಮೂಲಕ ಪುರುಷನಿಂದ ಕಿತ್ತುಕೊಳ್ಳಲಾಯಿತೆಂದೇ ಭಾವಿಸೋಣ. ಒಬ್ಬನು ಮುಸ್ಲಿಮರ ಶರೀಅತ್‌ನ ಪ್ರಕಾರ ತನ್ನ ಪತ್ನಿಗೆ ಪೂರ್ತಿ ವಿಚ್ಛೇದನ ಕೊಡುತ್ತಾನೆ. ಆಗ ಪರಿಸ್ಥಿತಿ ಏನಾದೀತು? ಕಾನೂನು ಈ ವಿಚ್ಛೇದನವನ್ನು ಅಂಗೀಕರಿಸುವುದಿಲ್ಲ. ಅಂದರೆ ಅವನು ಧರ್ಮ ಪ್ರಕಾರ ವಿಚ್ಛೇದನ ಕೊಟ್ಟ ಬಳಿಕವೂ ಕಾನೂನಿಗೆ ಮಣಿದು ಅದೇ ಪತ್ನಿಯ ಜೊತೆ ಬಾಳುವೆ ಮುಂದುವರಿಸಬೇಕು! ಶರೀಅತ್ ಪ್ರಕಾರವಂತೂ ಆಕೆ ಅವನ ಪತ್ನಿಯೇ ಅಲ್ಲದಿದ್ದರೂ ಹಾಗೆ ಮಾಡಲು ಅವನನ್ನು ಕಾನೂನು ನಿರ್ಬಂಧಿಸುತ್ತದೆ! ಅದೇ ರೀತಿ ಒಬ್ಬ ಪುರುಷನು ತನ್ನ ಪತ್ನಿ ಪರಪುರುಷರ ಜತೆ ಚಕ್ಕಂದವಾಡುವುದನ್ನು ತಾನೇ ಕಂಡರೂ ನ್ಯಾಯಾಲಯದಲ್ಲಿ ಅದನ್ನು ಸಾಬೀತು ಪಡಿಸಲು ಅಸಮರ್ಥನಾದಲ್ಲಿ ಅದೇ ರೀತಿ ಸಹಬಾಳುವೆ ನಡೆಸಲು ಅವನು ನಿರ್ಬಂಧಿತ. ಯಾಕೆಂದರೆ ತಲಾಕ್‌ನ ಹಕ್ಕನ್ನಂತೂ ಅವನಿಂದ ಕಸಿಯಲಾಗಿರುತ್ತದೆ. ಸುಶೀಲತೆ ಮತ್ತು ನೈತಿಕತೆಗೆ ಮೂಲಭೂತ ಪ್ರಾಶಸ್ತ್ಯ ನೀಡುವ ಸ್ವಾಭಿಮಾನಿ ಮುಸ್ಲಿಮ್ ಪುರುಷನೊಬ್ಬನ ಪಾಲಿಗೆ ಇಂತಹ ಕಾನೂನುಗಳು ಎಷ್ಟೊಂದು ಕಳವಳಕಾರಿ!

ಜೀವನಾಧಾರ ಒದಗಿಸುವ ವಿಷಯದಲ್ಲೂ, ಹಿಂದೂ ಕೋಡ್‌ನ ಪ್ರಕಾರ ಪತಿ ಪತ್ನಿಯರನ್ನು ಪರಸ್ಪರ ಬೇರ್ಪಡಿಸಿದ ಬಳಿಕ ಸ್ತ್ರೀ ಪುರುಷರಿಬ್ಬರ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ

ಸ್ತ್ರೀ ಅಥವಾ ಪುರುಷನ ಮೇಲೆ, ಅರ್ಜಿದಾರನು ದ್ವಿತೀಯ ವಿವಾಹ ಮಾಡಿಕೊಳ್ಳುವವರೆಗೆ ಅಥವಾ ಇಬ್ಬರಲ್ಲೊಬ್ಬರು ನಿಧನರಾಗುವವರೆಗೆ ಜೀವನಾಧಾರ ಒದಗಿಸುವ ಹೊಣೆಯನ್ನು ನ್ಯಾಯಾಲಯವು ಹೊರಿಸಬಹುದು. ಅಂದರೆ ಪುರುಷನ ಮೇಲೆ ಇರುವಂತೆ ಸ್ತ್ರೀಯ ಮೇಲೂ ಜೀವನಾಧಾರ ಒದಗಿಸುವ ಹೊಣೆ ಹೊರಿಸಿದಂತಾಯಿತು. ಅಲ್ಲದೆ ಅವರಿಬ್ಬರ ಮಧ್ಯೆಯೆ ವೈವಾಹಿಕ ಸಂಬಂಧ ಇಲ್ಲದಿದ್ದರೂ ಜೀವನಾಧಾರ ಒದಗಿಸುವ ಹೊಣೆಯಂತೂ ಇರುತ್ತದೆ. ಒಟ್ಟಿನಲ್ಲಿ ಹೀಗೆಲ್ಲಾ ಮಾಡಿ ವಿಚ್ಛೇದನ ಒಂದು ದುಸ್ಸಾಧ್ಯಕ್ರಿಯೆಯಾಗಿ ಮಾಡಲು ಪ್ರಯತ್ನಿಸಲಾಗಿದೆ. ಆದರೆ ಇದರ ಪರಿಣಾಮವೇನೆಂದು ಯಾರೂ ಆಲೋಚಿಸಿದಂತಿಲ್ಲ. ಒಬ್ಬ ಪುರುಷನು ತನ್ನ ಪತ್ನಿಯನ್ನು ತನ್ನ ಜೊತೆ ಇರಿಸಲು ಸ್ವಲ್ಪವೂ ಇಚ್ಛಿಸದಿದ್ದರೂ ಕಾನೂನು ಅವಳನ್ನು ಜೊತೆಗಿರಿಸುವಂತೆ ಅವನನ್ನು ನಿರ್ಬಂಧಿಸಿದರೆ ಅವನು ಖಂಡಿತವಾಗಿಯೂ ಆಕೆಯ ಬಾಳನ್ನು ನರಕವಾಗಿ ಮಾರ್ಪಡಲು ಬೇಕಾದ ಎಲ್ಲವನ್ನೂ ಮಾಡುವನು.

ಆಸ್ತಿ ಹಂಚಿಕೆಯ ವಿಷಯದಲ್ಲೂ ಹಿಂದೂ ವಾರೀಸು ಕಾಯಿದೆ(Hindu Succession Act, 1956) ಅನುಷ್ಠಾನದಲ್ಲಿದ್ದರು ಸಾಮಾನ್ಯವಾಗಿ ಇದನ್ನು ಹಿಂದೂ ಕೋಡ್ ಎಂದೇ ಕರೆಯಲಾಗುತ್ತದೆ. ಇದು ಕೂಡಾ ಹಿಂದೂ ಶಾಸ್ತ್ರದ ಬದಲು ಪಾಶ್ಚಾತ್ಯ ವಿಚಾರಗಳಲ್ಲಷ್ಟೇ ಅಧಿಷ್ಠಿತವಾಗಿದೆ. ಈ ಕಾಯಿದೆಯಲ್ಲಿ ಆಸ್ತಿ ಹಂಚಿಕೆಗೆ ನಿರ್ದಿಷ್ಟಪಡಿಸಿರುವ ನೀತಿ ನಿಯಮಗಳು ಹೀಗಿವೆ:

1. ತ್ಯಕ್ತ(ತೊರೆದ) ಸೊತ್ತನ್ನು ಪ್ರಥಮವಾಗಿ ಮೊದಲ ಸ್ತರದ ಬಂಧುಗಳಿಗೆ ಹಂಚಲಾಗುವುದು. ಇದರಲ್ಲಿ ಮಗ, ಮಗಳು, ಪತ್ನಿ, ಮಾತೆ ಮತ್ತು ತಾತನ ಜೀವನ ಕಾಲದಲ್ಲೇ ತಂದೆಯನ್ನು ಕಳಕೊಂಡ ಮೊಮ್ಮಗ ಮತ್ತು ಮೊಮ್ಮಗಳು ಸೇರಿದ್ದಾರೆ. ಈ ಪೈಕಿ ಎಲ್ಲರಿಗೂ ಸಮಾನ ಪಾಲು ದೊರೆಯುವುದು. ಆದರೆ ಮೊಮ್ಮಗ ಮತ್ತು ಮೊಮ್ಮಗಳಿಗೆ ಮಾತ್ರ ಒಂದು ಜಂಟಿ ಪಾಲು ಮಾತ್ರ ಸಿಗುವುದು.

2. ಮೊದಲ ಸ್ತರದ ಬಂಧುಗಳಾರೂ ಇಲ್ಲದಿದ್ದರೆ ತ್ಯಕ್ತ ಸೊತ್ತನ್ನು ಎರಡನೇ ಸ್ತರದ ಬಂಧುಗಳಿಗೆ ಹಂಚಲಾಗುತ್ತದೆ. ಇದರಲ್ಲಿ ಮೊದಲನೇ ಸ್ತರದವರಿಗೆ ಎರಡನೇ ಸ್ತರದವರಿಗಿಂತ ಹಾಗೂ ಎರಡನೇ ಸ್ತರದವರಿಗೆ ಮೂರನೇ ಸ್ತರದವರಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗುವುದು. ಮೊದಲ ಸ್ತರದಲ್ಲಿ ಕೇವಲ ತಂದೆಯೊಬ್ಬನು ಮಾತ್ರ ಹಕ್ಕುದಾರನಾಗಿರುವನು. ಎರಡನೇ ಸ್ತರದಲ್ಲಿ ಮಗನ ಮೊಮ್ಮಗ ಮತ್ತು ಅವನ ಮೊಮ್ಮಗಳು ಮತ್ತು ಸಹೋದರ ಮತ್ತು ಸಹೋದರಿ ಸೇರಿದ್ದಾರೆ. ಮೂರನೇ ಸ್ತರದಲ್ಲಿ ಮಗಳ ಮೊಮ್ಮಗ ಮತ್ತು ಮೊಮ್ಮಗಳು ಹಾಗೂ ಮೊಮ್ಮಗಳ ಮಗ ಮತ್ತು ಮಗಳು ಸೇರಿದ್ದಾರೆ. ನಾಲ್ಕನೇ ಸ್ತರದಲ್ಲಿ ಸಹೋದರನ ಮಗ, ಮಗಳು ಹಾಗೂ ಸಹೋದರಿಯ ಮಗ-ಮಗಳು ಒಳಪಡುತ್ತಾರೆ. ಐದನೇ ಸ್ತರದಲ್ಲಿ ತಾತ ಮತ್ತು ಅಜ್ಜ ಒಳಗೊಳ್ಳುವರಾದರೆ ಆರನೇ ಸ್ತರದಲ್ಲಿ ತಂದೆಯ ವಿಧವೆ ಹಾಗೂ ಸಹೋದರನ ವಿಧವೆ ಸೇರುತ್ತಾರೆ. ಏಳನೇ ಸ್ತರದಲ್ಲಿ ತಂದೆಯ ಸಹೋದರ ಮತ್ತು ಸಹೋದರಿ ಪಾಲ್ಗೊಳ್ಳುತ್ತಾರೆ.

3. ಸಾಯುವ ವ್ಯಕ್ತಿ ಮಹಿಳೆಯಾಗಿದ್ದರೆ ಅವಳ ಸೊತ್ತಿನಲ್ಲಿ ಪ್ರಥಮವಾಗಿ ಅವಳ ಗಂಡು ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಮತ್ತು ಅಜ್ಜಿ ಜೀವಂತವಿರುವಾಗ ತಮ್ಮ ತಂದೆಯನ್ನು ಕಳಕೊಂಡ ಮೊಮ್ಮಗ ಮತ್ತು ಮೊಮ್ಮಗಳಿಗೆ(ತಮ್ಮ ತಂದೆ ಜೀವಂತವಿದ್ದಿದ್ದರೆ ಆತನಿಗೆ ಸಿಗುತ್ತಿದ್ದಷ್ಟೇ ಪಾಲನ್ನು ಇವರಿಗೆ ಒಟ್ಟಾಗಿ ಕೊಡಲಾಗುವುದು) ಹಾಗೂ ಪತಿಗೆ ಹಂಚಲಾಗುವುದು. ಎರಡನೇ ಸ್ತರದಲ್ಲಿ ಪತಿಯ ವಾರಿಸುದಾರರು, ಮೂರನೆಯ ಸ್ತರದಲ್ಲಿ ತಂದೆ ತಾಯಿಗಳು, ನಾಲ್ಕನೇ ಸ್ತರದಲ್ಲಿ ತಂದೆಯ ಬಂಧುಗಳು ಮತ್ತು ಕೊನೆಯದಾಗಿ ತಾಯಿಯ ಬಂಧುಗಳ ನಡುವೆ ಹಂಚಲಾಗುವುದು.

ಈ ಆಸ್ತಿ ಹಂಚಿಕೆಯ ಕಾನೂನನ್ನು ಅದೆಷ್ಟೇ ತಿದ್ದಿ ತೀಡಿ ಸಮಾನ ಪೌರ ನಿಯಮದ ಹೆಸರಲ್ಲಿ ಜಾರಿಗೊಳಿಸಿದರೂ ಇದು ಇಸ್ಲಾಮೀ ಆಸ್ತಿ ಹಂಚಿಕೆ ಕಾನೂನಿಗೆ ಮೂಲಭೂತವಾಗಿ ವಿರುದ್ಧವಾಗಿದೆ. ಇಸ್ಲಾಮಿನಲ್ಲಿ ಹೆಣ್ಣಿನ ಪಾಲು ಗಂಡಿನ ಪಾಲಿನ ಅರ್ಧದಷ್ಟು ಮಾತ್ರ ಇದೆ. ಅದಕ್ಕೆ ಕಾರಣಗಳೇನೆಂದು ಈಗಾಗಲೇ ವಿವರಿಸಲಾಗಿದೆ. ಆದರೆ ಆಧುನಿಕ ನಾಗರಿಕತೆಯು ವಾಸ್ತವಿಕತೆಗಳನ್ನು ನಿರ್ಲಕ್ಷಿಸಿ ಸಮಾನತೆಯ ಕುರುಡು ನೀತಿಯೊಂದನ್ನು ನೆಚ್ಚಿಕೊಂಡಿದೆ. ಅದರ ಪ್ರಕಾರ ಸ್ತ್ರೀ ಪುರುಷರಿಬ್ಬರನ್ನು ಒಂದೇ ಸ್ತರದಲ್ಲಿ ನಿಲ್ಲಿಸಲಾಗುತ್ತದೆ. ಈ ಸಂಸ್ಕೃತಿಯ ಪ್ರಭಾವದಿಂದಾಗಿಯೇ ಹಿಂದೂ ನಿಯಮದಲ್ಲಿ ಮಗ ಮತ್ತು ಮಗಳಿಗೆ ಸಮಾನ ಪಾಲು ಒದಗಿಸಲಾಗಿದೆ. ನಿಜವಾಗಿ ಹಿಂದೂ ಸಂಪ್ರದಾಯದಂತೆ ಹೆಣ್ಣಿಗೆ ಆಸ್ತಿಯಲ್ಲಿ ಪಾಲು ಕೊಡುವ ಕಲ್ಪನೆಯೇ ಇರಲಿಲ್ಲ, ಅಂತೂ ಹಿಂದೆ ಒಂದು ವೈಪರೀತ್ಯ ನಡೆದಿತ್ತು. ಇಂದು ಇನ್ನೊಂದು ವೈಪರೀತ್ಯ ನಡೆಯುತ್ತಿದೆ. ಆದರೆ ಇಸ್ಲಾಮಿನ ದಾರಿ ಎಂದೆಂದೂ ಈ ರೀತಿಯ ವೈಪರೀತ್ಯಗಳಿಗೆ ತುತ್ತಾಗದೆ ಮಧ್ಯಮವಾಗಿ ಸಂತುಲಿತವಾಗಿ ಸಾಗುತ್ತದೆ.

ಇಸ್ಲಾಮಿನಲ್ಲಿ ಪತ್ನಿಯ ಪಾಲು ಆಕೆಗೆ ಮಕ್ಕಳಿದ್ದರೆ ಎಂಟನೇ ಒಂದಂಶ, ಮಕ್ಕಳಿಲ್ಲದಿದ್ದರೆ ನಾಲ್ಕನೇ ಒಂದಂಶ ಎಂದು ಸಾರಲಾಗಿದೆ. ತಾಯಿಯ ಪಾಲು ಆಕೆಗೆ ಮಕ್ಕಳಿದ್ದಲ್ಲಿ ಆರನೇ ಒಂದಂಶ ಹಾಗೂ ಮಕ್ಕಳು ಇಲ್ಲದಿದ್ದರೆ ಮೂರನೇ ಒಂದಂಶ ಎಂದು ಹೇಳಲಾಗಿದೆ. ಆದರೆ ಹಿಂದೂ ನಿಯಮದಲ್ಲಿ ತಾಯಿ ಮತ್ತು ತನ್ನ ಮಗ ಮತ್ತು ಮಗಳು ಎಲ್ಲರ ಪಾಲೂ ಸಮಾನವಾಗಿದೆ. ಇಸ್ಲಾಮಿನಲ್ಲಿ ತಂದೆಯ ಪಾಲು ಅವನಿಗೆ ಮಕ್ಕಳಿದ್ದರೆ ಆರನೇ ಒಂದಂಶ ಎಂದೂ ಮಕ್ಕಳಿಲ್ಲದಿದ್ದರೆ ಪತ್ನಿ ಮತ್ತು ತಾಯಿಗೆ ಕೊಟ್ಟ ಬಳಿಕ ಉಳಿದೆಲ್ಲ ಸೊತ್ತಿಗೆ ತಂದೆಯೇ ಹಕ್ಕುದಾರನೆಂದೂ ಘೋಷಿಸಲಾಗಿದೆ. ಆದರೆ ಹಿಂದೂ ನಿಯಮದಲ್ಲಿ ತಂದೆಯನ್ನು ಎರಡನೇ ಸ್ತರದ ಹಕ್ಕುದಾರನೆಂದು ಪರಿಗಣಿಸಲಾಗಿದೆ. ಅರ್ಥಾತ್ ಮೊದಲ ಸ್ತರದ ಹಕ್ಕುದಾರರಾದ ಮಗ, ಮಗಳು ಪತ್ನಿ ಮತ್ತು ತಾಯಿಯ ಉಪಸ್ಥಿತಿಯಲ್ಲಿ ತಂದೆಗೆ ಕಿಂಚಿತ್ತೂ ಪಾಲು ಸಿಗದು. ಆಧುನಿಕ ಸಂಸ್ಕೃತಿಯ ನ್ಯಾಯಕಲ್ಪನೆ ಹೇಗಿದೆಯೆಂದರೆ ತಾಯಿಗೆ ಕಡ್ಡಾಯವಾಗಿ ಪಾಲು ದೊರೆಯಬೇಕು ಆದರೆ ತಂದೆಗೆ ಸಿಗಬೇಕೆಂದಿಲ್ಲ.

ಇಸ್ಲಾಮಿನ ಪ್ರಕಾರ ನಿಕಟ ಸಂಬಂಧಿಕರ ಉಪಸ್ಥಿತಿಯಲ್ಲಿ ಇತರ ಸಂಬಂಧಿಕರಿಗೆ ಪಾಲು ದೊರೆಯುವುದಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿ ತನ್ನ ಮರಣಕ್ಕೆ ಮುಂಚೆ ತನ್ನ ಸೊತ್ತಿನ ಮೂರನೇ

ಒಂದಂಶದ ಬಗ್ಗೆ ಸ್ವತಂತ್ರವಾಗಿ ಉಯಿಲು ಬರೆಸಲು ಅಧಿಕಾರ ಹೊಂದಿರುತ್ತಾನೆ. ಅನಾಥ ಮೊಮ್ಮಗನ ಸಮಸ್ಯೆಯ ಪರಿಹಾರವು ಇಲ್ಲೇ ಅಡಗಿದೆ. ಆದರೆ ಹಿಂದೂ ನಿಯಮದಲ್ಲಿ ಇದಕ್ಕಿಂತ ಭಿನ್ನವಾದ ಕ್ರಮವೊಂದನ್ನು ಅನುಸರಿಸಲಾಗಿದೆ. ಅತ್ಯಂತ ನಿಕಟ ಬಂಧುಗಳ ಉಪಸ್ಥಿತಿಯಲ್ಲೇ ಇತರ ಸಂಬಂಧಿಕರಿಗೆ ಆಸ್ತಿಯಲ್ಲಿ ಅಧಿಕಾರ ಕೊಡಲಾಗಿದೆ.

ಪ್ರಚಲಿತ ಹಿಂದೂ ನಿಯಮದಲ್ಲಿ ಹೆಣ್ಮಕ್ಕಳಿಗೆ ಪಾಲು ಕೊಡುವ ಇತ್ಯಾದಿ ಕೆಲವು ವಿಷಯಗಳಲ್ಲಿ ಇಸ್ಲಾಮೀ ಸಂಹಿತೆಯನ್ನು ಅನುಸರಿಸಲಾಗಿದೆಯಾದರೂ ಇದು ಮೂಲಭೂತವಾಗಿಯೇ ಇಸ್ಲಾಮೀ ಆಸ್ತಿ ಹಂಚಿಕೆ ಕ್ರಮಕ್ಕೆ ವಿರುದ್ಧವಾಗಿದೆ. ಅಂತಲೇ ಇದು ಸಮಾನ ಪೌರ ನಿಯಮದ ರೂಪ ತಾಳಿದರೆ ಮುಸ್ಲಿಮರ ಪಾಲಿಗೆ ಅತ್ಯಂತ ಗಂಭೀರ ಸಮಸ್ಯೆಗಳು ಹುಟ್ಟಿಕೊಳ್ಳುವುದು ಖಚಿತ. ಈ ನಿಯಮ ಜಾರಿಗೆ ಬಂದರೆ ಮುಸ್ಲಿಮ್ ಸಂಬಂಧಿಕನೊಬ್ಬನಿಗೆ ತನಗೆ ಶರೀಅತ್ ಪ್ರಕಾರ ಸಿಗಬೇಕಾದ ಪಾಲಿಗಿಂತ ಕಡಿಮೆ ಸಿಗುತ್ತದೆ. ಇನ್ನೊಬ್ಬನಿಗೆ ಹೆಚ್ಚು ಸಿಗುತ್ತದೆ. ಮತ್ತೊಬ್ಬನಿಗೆ ಸಿಗುವುದೇ ಇಲ್ಲ. ಇದು ಒಂದು ರೀತಿಯ ಘೋರ ಅನ್ಯಾಯವಾಗಿದೆ. ಆದ್ದರಿಂದ ಶರೀಅತ್‌ನ ಅನುಮತಿಗಿಂತ ಹೆಚ್ಚಿನ ಪಾಲು ಪಡೆದವನಿಗೆ ಆ ಪಾಲು ಧರ್ಮ ಬದ್ಧವಾಗಿರುವುದಿಲ್ಲ. ಏಕೆಂದರೆ ಅವನಿಗೆ ಇನ್ನೊಬ್ಬನ ಹಕ್ಕಿನಲ್ಲಿ ಚ್ಯುತಿ ಮಾಡಿ ಆ ಪಾಲನ್ನು ಕೊಡಲಾಗಿದೆ. ಇಷ್ಟಿದ್ದರೂ ಸಮಾನ ಪೌರ ನಿಯಮವನ್ನು ಬೆಂಬಲಿಸುತ್ತಿರುವ ಮಹನೀಯರು ಬಹುಶಃ ಮುಸ್ಲಿಮರಿಗೆ ಧರ್ಮ ಹಾಗೂ ಕಾನೂನುಬಾಹಿರ ಸೊತ್ತನ್ನು ತಿನ್ನಿಸಬೇಕೆಂದು ಪಣತೊಟ್ಟಿರಬೇಕು.

ಭಾರತೀಯ ವಾರೀಸು ಕಾಯಿದೆ 1925

ಸಮಾನ ಪೌರ ನಿಯಮ(Uniform Civil Code)ದ ರೂಪುರೇಷೆಗಳನ್ನು ಸ್ಪಷ್ಟಪಡಿಸುವುದಷ್ಟೇ ಇಲ್ಲಿ ನಾವು ಹಿಂದೂ ನಿಯಮ(Hindu Code)ದ ವಿಧಿಗಳನ್ನು ಉದಾಹರಿಸಿದ್ದರ ಉದ್ದೇಶ. ಒಂದು ವೇಳೆ ಯಾರಾದರೂ ಸಮಾನ ಪೌರ ನಿಯಮವನ್ನು ಹಿಂದೂ ನಿಯಮದ ಹಿನ್ನೆಲೆಯಲ್ಲಿ ನೋಡುವುದು ಸರಿಯಲ್ಲ ಎಂದು ಭಾವಿಸುವುದಾದರೆ ಅವರು ಅದನ್ನು ಅಲ್ಲಿಗೇ ಬಿಟ್ಟು ಭಾರತೀಯ ವಾರೀಸು ಕಾಯಿದೆ(Indian Succession Act, 1925) ಮತ್ತು ವಿಶೇಷ ವಿವಾಹ ಕಾಯಿದೆ(Special Marriage Act, 1954)ಗಳನ್ನು ಅಭ್ಯಸಿಸಿದರೆ ಅಲ್ಲಿ ಸಮಾನ ಪೌರ ನಿಯಮದ ಛಾಯೆಯನ್ನು ಕಾಣಲು ಸಾಧ್ಯವಿದೆ.

ಭಾರತೀಯ ವಾರೀಸು ಕಾಯಿದೆಯು ಮುಸ್ಲಿಮರು, ಹಿಂದೂಗಳು, ಬೌದ್ಧರು, ಜೈನರು ಮತ್ತು ಸಿಖ್ಖರನ್ನುಳಿದು ಉಳಿದೆಲ್ಲಾ ಪೌರರಿಗೆ ಅನ್ವಯಿಸುತ್ತದೆ. ಈ ಕಾಯಿದೆಯಲ್ಲಿ ವಾರೀಸು ಹಕ್ಕಿಗೆ ಸಂಬಂಧಿಸಿದಂತೆ ಇರುವ ನಿಯಮಗಳ ಸಾರಾಂಶ ಹೀಗಿದೆ:

1. ಉಯಿಲು ಹೇಳುವ ಬಗ್ಗೆ ಯಾವುದೇ ನಿರ್ಬಂಧ ಇಲ್ಲ. ಒಬ್ಬ ವ್ಯಕ್ತಿ ತನ್ನ ಸಂಪೂರ್ಣ ಆಸ್ತಿಯ ಮೇಲೂ ಉಯಿಲು ಹೇಳಬಹುದು.(ಸೆಕ್ಷನ್-59)

2. ಮೃತನು ಯಾವುದೇ ಉಯಿಲು ಹೇಳಿಲ್ಲವಾದರೆ ಅವನ ಪತ್ನಿಗೆ ಮೂರನೇ ಒಂದಂಶ ಹಾಗೂ ಮಕ್ಕಳಿಗೆ ಮೂರನೇ ಎರಡಂಶ ಸಿಗುವುದು.(ಸೆಕ್ಷನ್ 33 ರಿಂದ 43)

3. ಮಕ್ಕಳಿಲ್ಲದಿದ್ದರೆ ಪತ್ನಿಗೆ ಅರ್ಧ ಪಾಲು ಸಿಗುವುದೂ ಹಾಗೂ ಉಳಿದ ಪಾಲನ್ನು ಇತರ ಬಂಧುಗಳಿಗೆ ಹಂಚಲಾಗುವುದು.

4. ಅವನಿಗೆ ಪತ್ನಿ ಇಲ್ಲದಿದ್ದಲ್ಲಿ ಅವನ ಸಂಪೂರ್ಣ ಸೊತ್ತನ್ನು ಅವನ ಮಕ್ಕಳಿಗೆ ಹಂಚಿ ಕೊಡಲಾಗುವುದು. ಮಕ್ಕಳೂ ಇಲ್ಲದ ಸ್ಥಿತಿಯಲ್ಲಿ ಇತರ ಬಂಧುಗಳಿಗೆ ನೀಡಲಾಗುವುದು. ಬಂಧುಗಳೂ ಇರದಿದ್ದರೆ ಸಂಪೂರ್ಣ ಆಸ್ತಿ ಸರಕಾರದ ಸ್ವಾಮ್ಯಕ್ಕೆ ಒಳಪಡುವುದು.

5. ವಿಧುರನಿಗೆ, ವಿಧವೆಗೆ ಸಿಗುವಷ್ಟು ಪಾಲು ಸಿಗುವುದು.

6. ಮಕ್ಕಳಿಗೆ ಆಸ್ತಿಯನ್ನು ಸಮಾನ ರೀತಿಯಲ್ಲಿ ಹಂಚಿ ಕೊಡಲಾಗುವುದು. ಅರ್ಥಾತ್ ಹೆಣ್ಮಕ್ಕಳು ಮತ್ತು ಗಂಡು ಮಕ್ಕಳು ಸಮಾನ ಪಾಲು ಪಡೆಯುವರು.

7. ಮಕ್ಕಳಲ್ಲಿ ಯಾರಾದರೂ ಸತ್ತಿದ್ದರೆ ಅವನ ಪಾಲನ್ನು ಅವನ ಮಕ್ಕಳಿಗೆ ಕೊಡಲಾಗುವುದು.

8. ಮೃತನಿಗೆ ಮಕ್ಕಳಿಲ್ಲದಿದ್ದಲ್ಲಿ ಅವನ ಪತ್ನಿಗೆ ಅವನ ಪಾಲನ್ನು ಕೊಟ್ಟ ಬಳಿಕ ಉಳಿದ ಸೊತ್ತಿನ ಹಂಚಿಕೆ ಹೀಗಿರುವುದು.

(ಅ) ಮೃತನ ತಂದೆ ಜೀವಂತವಿದ್ದರೆ ಉಳಿದ ಸಂಪೂರ್ಣ ಆಸ್ತಿಗೆ ಅವನೇ ಪ್ರಭುವಾಗುವನು.

(ಆ) ತಂದೆ ಜೀವಂತವಿಲ್ಲದಿದ್ದರೆ ಮೃತನ ತಾಯಿ, ಸಹೋದರರು ಮತ್ತು ಸಹೋದರಿಯರಿಗೆ ಆಸ್ತಿಯನ್ನು ಸಮಾನವಾಗಿ ಹಂಚಲಾಗುವುದು.

ಈ ಕಾಯಿದೆ ಕೂಡ ಮೂಲಭೂತವಾಗಿಯೇ ಇಸ್ಲಾಮೀ ವಾರೀಸು ವ್ಯವಸ್ಥೆಗಿಂತ ಭಿನ್ನವಾಗಿದೆ. ಇಸ್ಲಾಮಿನಲ್ಲಿ ವ್ಯಕ್ತಿಗೆ ತನ್ನ ಸೊತ್ತಿನ ಮೂರನೇ ಒಂದು ಭಾಗದ ಬಗ್ಗೆ ಮಾತ್ರ ಉಯಿಲು ಹೇಳುವ ಹಕ್ಕು ಕೊಡಲಾಗಿದೆ. ಪ್ರಸ್ತುತ ಭಾರತೀಯ ವಾರೀಸು ಕಾಯಿದೆಯು ಸಂಪೂರ್ಣ ಆಸ್ತಿಯ ಬಗ್ಗೆ ಉಯಿಲು ಹೇಳಲು ಅನುಮತಿಸುತ್ತದೆ. ಇಸ್ಲಾಮಿನಲ್ಲಿ ಪುರುಷನ ಅರ್ಧಪಾಲು ಮಹಿಳೆಗೆ ನಿಶ್ಚಯಿಸಲಾಗಿದೆ. ಆದರೆ ಪ್ರಸ್ತುತ ಕಾಯಿದೆಯಲ್ಲಿ ಇಬ್ಬರಿಗೂ ಸಮಾನ ಪಾಲು ಘೋಷಿಸಲಾಗಿದೆ. ಇಸ್ಲಾಮಿನಲ್ಲಿ ಪತ್ನಿಗೆ, ಮಕ್ಕಳಿದ್ದರೆ ಎಂಟನೇ ಒಂದು ಪಾಲು ಹಾಗೂ ಮಕ್ಕಳಿಲ್ಲದಿದ್ದರೆ ನಾಲ್ಕನೇ ಒಂದು ಪಾಲು ಎಂದು ಘೋಷಿಸಲಾಗಿದೆ. ಆದರೆ ಭಾರತೀಯ ವಾರೀಸು ಕಾಯಿದೆಯ ಪ್ರಕಾರ ಪತ್ನಿಗೆ, ಮಕ್ಕಳಿದ್ದರೆ ಮೂರನೇ ಒಂದು ಪಾಲು ಹಾಗೂ ಮಕ್ಕಳಿಲ್ಲದಿದ್ದರೆ ಅರ್ಧ ಪಾಲು ಸಿಗುತ್ತದೆ. ಇದೇ ರೀತಿ ಪತಿಗೂ, ಮಕ್ಕಳಿದ್ದರೆ ಮೂರನೇ ಒಂದು ಪಾಲು ಹಾಗೂ ಮಕ್ಕಳಿಲ್ಲದಿದ್ದರೆ ಅರ್ಧ ಪಾಲು ನೀಡಲಾಗುತ್ತದೆ. ಆದರೆ ಇಸ್ಲಾಮಿನಲ್ಲಿ ಪತಿಗೆ, ಮಕ್ಕಳಿದ್ದರೆ ಅರ್ಧಪಾಲು ಮತ್ತು ಮಕ್ಕಳಿಲ್ಲದಿದ್ದರೆ ನಾಲ್ಕನೇ ಒಂದು ಪಾಲು ನೀಡಬೇಕು.

ಇಸ್ಲಾಮೀ ವಾರೀಸು ಕಾಯಿದೆಯಲ್ಲಿ ಮೃತನಿಗೆ ಮಕ್ಕಳು ಇದ್ದರೂ ಇಲ್ಲದಿದ್ದರೂ

ಹೆತ್ತವರಿಗೆ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಆದರೆ ಪ್ರಸ್ತುತ ಭಾರತೀಯ ಕಾಯಿದೆಯ ಪ್ರಕಾರ ಮೃತನಿಗೆ ಮಕ್ಕಳು ಇರುವ ಪಕ್ಷದಲ್ಲಿ ಹೆತ್ತವರಿಗೆ ಪಾಲು ಸಿಗುವುದೇ ಇಲ್ಲ.

ಒಟ್ಟಿನಲ್ಲಿ ಈ ಎಲ್ಲ ಉದಾಹರಣೆಗಳಿಂದ ತಿಳಿಯುವುದೇನೆಂದರೆ ಒಂದು ವೇಳೆ ಭಾರತೀಯ ವಾರೀಸು ಕಾಯಿದೆ(1925) ಜಾರಿಗೆ ಬಂದರೆ ಅದರಿಂದ ಮುಸ್ಲಿಮರ ವಾರೀಸು ಹಕ್ಕು ವ್ಯವಸ್ಥೆಯು ಸಂಪೂರ್ಣವಾಗಿ ಅಸ್ತವ್ಯಸ್ತಗೊಳ್ಳುವುದು ಹಾಗೂ ಶರೀಅತ್‌ಗೆ ಸಂಪೂರ್ಣ ವಿರುದ್ಧವಾಗಿರುವ ಮಾತ್ರವಲ್ಲ ನ್ಯಾಯ ಸಮ್ಮತವೂ ಅಲ್ಲದ ಒಂದು ವ್ಯವಸ್ಥೆಯನ್ನು ಅವರ ಮೇಲೆ ಹೇರಿದಂತಾಗುವುದು.

ವಿಶೇಷ ವಿವಾಹ ಕಾಯಿದೆ

1954ರ ವಿಶೇಷ ವಿವಾಹ ಕಾಯಿದೆ(Special Marriage Act)ಯ ಪ್ರಕಾರ ಯಾವುದೇ ಸ್ತ್ರೀ ಪುರುಷರು, ತಾವು ಈ ಕಾಯಿದೆಯಂತೆ ಪರಸ್ಪರರನ್ನು ವಿವಾಹವಾಗುವುದಾಗಿ ವಿವಾಹ ಅಧಿಕಾರಿ(Marriage Officer)ಯ ಮುಂದೆ ಹಾಗೂ ಲಿಖಿತ ರೂಪದಲ್ಲಿ ಘೋಷಿಸಿದರೆ ಅವರ ವಿವಾಹ ನೆರವೇರುತ್ತದೆ.

ಈ ಕಾಯಿದೆಯಲ್ಲಿ ಶರೀಅತ್‌ಗೆ ವಿರುದ್ಧವಾಗಿ ಅನೇಕ ಅಂಶಗಳಿದ್ದು ಈ ಪೈಕಿ ಕೆಲವು ಇಂತಿವೆ:

1. ಒಬ್ಬ ಪತ್ನಿಯ ಉಪಸ್ಥಿತಿಯಲ್ಲಿ ಇನ್ನೊಂದು ವಿವಾಹವಾಗುವುದು ಅಪರಾಧ. ಈ ಅಪರಾಧ ಎಸಗಿದವರಿಗೆ 7 ವರ್ಷ ಕಾರಾಗೃಹ ವಾಸ ವಿಧಿಸಬಹುದು.

2. ಚಿಕ್ಕಪ್ಪನ ಮಗ, ಸೋದರತ್ತೆಯ ಮಗ ಹಾಗೂ ಸೋದರ ಮಾವನ ಮಗನನ್ನು ವಿವಾಹವಾಗಬಾರದು.

3. ವಿಚ್ಛೇದನ ಅಧಿಕಾರ ಕೇವಲ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ. ಸ್ತ್ರೀ ಪುರುಷರ ಪೈಕಿ ವಿಚ್ಛೇದನ ಬಯಸುವವರು ಪ್ರಸ್ತುತ ಕಾಯಿದೆಯಲ್ಲಿ ಒಳಗೊಂಡಿರುವ ಯಾವುದಾದರೂ ಕಾರಣವನ್ನು ಬುನಾದಿಯಾಗಿಟ್ಟು ನ್ಯಾಯಾಲಯದಲ್ಲಿ ವಿಚ್ಛೇದನ ಕೇಳಬಹುದು. ನ್ಯಾಯಾ ಲಯಕ್ಕೆ ತೃಪ್ತಿಯಾದರೆ ಅದು ಈ ಪತಿ-ಪತ್ನಿಯರನ್ನು ಪರಸ್ಪರ ಬೇರ್ಪಡಿಸಬಹುದು.

4. ಸ್ತ್ರೀ ಪುರುಷರಿಬ್ಬರೂ ಪರಸ್ಪರ ಬೇರ್ಪಡಲು ಇಚ್ಛಿಸಿದಾಗ ಅವರು ವಿಚ್ಛೇದನವನ್ನು ನ್ಯಾಯಾಲಯದಿಂದಲೇ ಪಡೆಯಬೇಕು.

5. ವಿಚ್ಛೇದನದ ಯಾವುದೇ ಅರ್ಜಿಯನ್ನು ವಿವಾಹದ ಮೂರು ವರ್ಷಗಳೊಳಗೆ ಸಲ್ಲಿಸುವಂತಿಲ್ಲ.

6. ನ್ಯಾಯಾಲಯದ ಮೂಲಕ ಬೇರ್ಪಟ್ಟ ಬಳಿಕ ಸ್ತ್ರೀ ಪುರುಷರ ಪೈಕಿ ಯಾರೊಬ್ಬರೂ ಒಂದು ವರ್ಷದ ತನಕ ಮರು ವಿವಾಹ ಮಾಡಿಕೊಳ್ಳುವಂತಿಲ್ಲ.

7. ನ್ಯಾಯಾಲಯದ ಮೂಲಕ ವಿಚ್ಛೇದನವಾಗಿದ್ದಲ್ಲಿ ಪುರುಷನು ಸ್ತ್ರೀಗೆ ಆಕೆ ಇನ್ನೊಂದು ವಿವಾಹವಾಗುವವರೆಗೆ ಅಥವಾ ಆಕೆಯ ಮರಣದ ತನಕ ಜೀವನಾಧಾರವನ್ನೊದಗಿಸಬೇಕು.

8. ಈ ಕಾಯಿದೆಯ ಪ್ರಕಾರ ವಿವಾಹವಾಗುವಾತನ ಮೇಲೆ 1925ರ ಭಾರತೀಯ ವಾರೀಸು ಕಾಯಿದೆ(Indian Succession Act, 1925) ಅನ್ವಯವಾಗುವುದು.

ಮುಸ್ಲಿಮರ ನಿಲುವು

ಹಿಂದೂ ಕೋಡ್, (Indian Succession Act) ಮತ್ತು (Special Marriage Act) ಕುರಿತು ನೀಡಲಾದ ಸಂಕ್ಷಿಪ್ತ ವಿಮರ್ಶೆಯಿಂದ ಅನೇಕ ವಿಷಯಗಳು ಸ್ಪಷ್ಟಗೊಳ್ಳುತ್ತವೆ.

1) ಈ ಮೂರು ಕಾಯಿದೆಗಳ ನಿರ್ಮಾತೃಗಳೇ ಇದೀಗ ಒಂದು ಸಮಾನ ಪೌರ ಸಂಹಿತೆಯ ನಿರ್ಮಾಣಕ್ಕೆ ಹೊರಟಿರುವುದು. 2) ಮೂರು ವಿಭಿನ್ನ ಕಾಯಿದೆಗಳನ್ನು ರೂಪಿಸಿದ ಈ ಮಂದಿ ಸಮಾನ ಪೌರ ಸಂಹಿತೆಯ ಹೆಸರಲ್ಲಿ ನಾಲ್ಕನೇ ಕಾಯಿದೆಯನ್ನು ರೂಪಿಸಿದರೆ ಅದರಲ್ಲಿ ಆಶ್ಚರ್ಯವಿಲ್ಲ. 3) ಆಂತರಿಕ ಅಥವಾ ಕೌಟುಂಬಿಕ ಸಮಸ್ಯೆಗಳ ವಿಷಯದಲ್ಲಿ ಬಹುಸಂಖ್ಯಾತರ ವಿಚಾರ ಸರಣಿಯು ಸಂಪೂರ್ಣವಾಗಿ ಐರೋಪ್ಯದಿಂದ ಎರವಲು ಪಡೆದುದು. 4) ಪ್ರಸ್ತುತ ಮೂರು ನಿಯಮಗಳ ಹಿಂದೆಯೂ ಆಧುನಿಕ ಒಲವುಗಳು ಹಾಗೂ ಆಧುನಿಕ ವಿಚಾರಗಳ ಪ್ರಭಾವವು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ವಾಸ್ತವಿಕತೆಗಳು ಯೋಜಿತ ಸಮಾನ ಪೌರ ಸಂಹಿತೆಯ ರೂಪುರೇಷೆಗಳನ್ನು ವ್ಯಕ್ತಗೊಳಿಸುತ್ತಿದೆ. ಪ್ರಸ್ತುತ ಮೂರು ಕಾಯಿದೆಗಳೂ ಅದರ ಮೇಲೆ ಬೆಳಕು ಚೆಲ್ಲುತ್ತವೆ.

ಇಸ್ಲಾಮನ್ನು ಅಲ್ಲಾಹನು ಅವತೀರ್ಣಗೊಳಿಸಿದ ಸತ್ಯ ಧರ್ಮವೆಂದೂ ಮುಸ್ಲಿಮ್ ಪರ್ಸನಲ್ ಲಾವನ್ನು ದೇವ ನಿರ್ಮಿತ ಧರ್ಮ ಸಂಹಿತೆಯ ಅವಿಭಾಜ್ಯ ಅಂಗವೆಂದು ನಂಬುವ ಓರ್ವ ಮುಸ್ಲಿಮನು 'ಮುಸ್ಲಿಮ್ ಪರ್ಸನಲ್ ಲಾ'ವನ್ನು ಕೊನೆಗೊಳಿಸಲು ಅಥವಾ ಸಮಾನ ಪೌರ ನಿಯಮವನ್ನು ಜಾರಿಗೊಳಿಸಲು ಅಪೇಕ್ಷಿಸುವುದಾದರು ಹೇಗೆ? ಅವನಂತೂ, ಪವಿತ್ರ ಕುರ್‌ಆನ್ ಮತ್ತು ಪವಿತ್ರ ಸುನ್ನತ್‌ನ(ಪ್ರವಾದಿಚರ್ಯೆ) ಇಂಗಿತಕ್ಕೆ ವಿರುದ್ಧವಾಗಿ, ಕೇವಲ ಆಧುನಿಕತೆಯನ್ನು ತೃಪ್ತಿಗೊಳಿಸಲು ಮಾಡುವ ಯಾವುದೇ ಕಿಂಚಿತ್ ಬದಲಾವಣೆಯನ್ನು ಕ್ಷಣ ಮಾತ್ರಕ್ಕೂ ಸಹಿಸಲಾರ.

ಅಲ್ಲಾಹನ ಅನುಗ್ರಹದಿಂದ ಈ ವಿಷಯದಲ್ಲಿ ಮುಸ್ಲಿಮ್ ಜನಾಭಿಪ್ರಾಯವು ಜಾಗೃತವಾಗಿದೆ. ಅವರು ಮುಸ್ಲಿಮ್ ವ್ಯಕ್ತಿ ನಿಯಮದಲ್ಲಿ ಯಾವುದೇ ಬದಲಾವಣೆಗೆ ಒಪ್ಪುವುದಿಲ್ಲ. ಅಲ್ಲದೆ ಇನ್ನೊಂದು ಸ್ತುತ್ಯರ್ಹ ಬೆಳವಣಿಗೆಯೇನೆಂದರೆ ಪರ್ಸನಲ್ ಲಾ ವಿರೋಧಿಗಳು ಮುಸ್ಲಿಮ್ ಮಹಿಳೆಯರೆಲ್ಲಾ ಮುಸ್ಲಿಮ್ ಪರ್ಸನಲ್ ಲಾದಿಂದ ಬೇಸತ್ತಿದ್ದಾರೆಂಬ ರೀತಿಯಲ್ಲಿ ಪ್ರಚಾರ ಆರಂಭಿಸಿದಾಗಲೇ ಮುಸ್ಲಿಮ್ ಮಹಿಳೆಯರು ಪರ್ಸನಲ್ ಲಾದ ರಕ್ಷಣೆಗಾಗಿ ರಂಗಕ್ಕಿಳಿದಿದ್ದಾರೆ. ಮುಂಬಯಿ, ನಾಗಪುರ, ನಾಂದೇಡ್, ಹೈದರಾಬಾದ್, ಪೂನಾ, ಅಹ್ಮದಾಬಾದ್, ಅಲಾಹಾಬಾದ್, ಬೆಂಗಳೂರು, ಕಲ್ಕತ್ತಾ ಇತ್ಯಾದಿ ಅನೇಕ ಸ್ಥಳಗಳಲ್ಲಿ ಅವರ ಬೃಹತ್ ಸಮ್ಮೇಳನಗಳು ನಡೆದವು. ಅವುಗಳಲ್ಲಿ ಮಹಿಳೆಯರು ಸಹಸ್ರಾರು ಸಂಖ್ಯೆಯಲ್ಲಿ

ಪಾಲ್ಗೊಂಡು ಮುಸ್ಲಿಮ್ ವ್ಯಕ್ತಿ ನಿಯಮಕ್ಕೆ ತಮ್ಮ ಬಲವಾದ ಬೆಂಬಲವನ್ನು ಸಾರಿದರು. ಎಲ್ಲಾ ರೀತಿಯಲ್ಲೂ ತಾವೂ ಶರೀಅತ್ ನಿಯಮಗಳಿಂದ ತೃಪ್ತರಾಗಿದ್ದೇವೆಂದು ಘೋಷಿಸಿದರು.

ಮುಸ್ಲಿಮ್ ಪರ್ಸನಲ್ ಲಾದ ಪ್ರಸ್ತುತ ಮಹತ್ವ ಅದರ ಧಾರ್ಮಿಕ ಸ್ವರೂಪ ಹಾಗೂ ಅದರ ಹಿಂದೆ ಇರುವ ಮುಸ್ಲಿಮ್ ಸಾರ್ವಜನಿಕ ಬೆಂಬಲ ಇವುಗಳ ಹಿನ್ನೆಲೆಯಲ್ಲಿ ನೋಡಿದರೆ ಮುಸ್ಲಿಮ್ ಪರ್ಸನಲ್ ಲಾವನ್ನು ತಿದ್ದುಪಡಿ ಮಾಡಬೇಕು ಅಥವಾ ಅದನ್ನು ರದ್ದುಗೊಳಿಸಬೇಕೆಂಬ ಬೇಡಿಕೆಯು ಯಾವ ವರ್ಗದಿಂದ ಬಂದರೂ ಅದು ಸಂಪೂರ್ಣ ತಿರಸ್ಕಾರ ಯೋಗ್ಯ ಎಂದು ಮನವರಿಕೆಯಾಗುತ್ತದೆ. ಮುಸ್ಲಿಮರ ಯಾವುದೇ ಪಂಗಡಕ್ಕೂ ಇಂಥ ಬೇಡಿಕೆ ಭೂಷಣವಲ್ಲ, ಇನ್ನು ಮುಸ್ಲಿಮೇತರರ ವಿಷಯ.ಅವರು ಕೂಡಾ ಮುಸ್ಲಿಮರ ಸಮಸ್ಯೆಗಳು ಮತ್ತವುಗಳ ಸ್ವರೂಪವನ್ನು ಅರಿಯಲು ಪ್ರಯತ್ನಿಸಿದರೆ ಖಂಡಿತವಾಗಿಯೂ ಮುಸ್ಲಿಮರ ಬಗ್ಗೆ ವಿಶಾಲ ಮನೋಭಾವದಿಂದ ವರ್ತಿಸಲು ಸನ್ನದ್ಧರಾಗಬಹುದು. ಅಲ್ಲದೆ ಆಗ ಅವರು ಮುಸ್ಲಿಮ್ ಪರ್ಸನಲ್ ಲಾ ದ ಕುರಿತು ಮುಸ್ಲಿಮರ ನಿಲುವನ್ನು ತಪ್ಪು ತಿಳಿಯುವ ಬದಲು ಅದು ಮುಸ್ಲಿಮರ ಧಾರ್ಮಿಕ ಹೊಣೆ ಎಂದು ಭಾವಿಸಬಹುದು. ಅದೇ ರೀತಿ ಸರಕಾರ ಕೂಡಾ ಮುಸ್ಲಿಮರ ನಿಲುವನ್ನು ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಧರ್ಮದಲ್ಲಿ ಹಸ್ತಕ್ಷೇಪವೆನಿಸಬಹುದಾದಂತಹ ಯಾವುದೇ ಹೆಜ್ಜೆಯನ್ನು ಅದು ಮುಸ್ಲಿಮ್ ಪರ್ಸನಲ್ ಲಾದ ವಿರುದ್ಧ ಇರಿಸಬಾರದು. ಬದಲಾಗಿ ಹೆಚ್ಚೆಚ್ಚು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯಕ್ಕೆ ಪುಷ್ಟಿ ನೀಡುತ್ತಾ ಪ್ರಜಾಸತ್ತೆಯನ್ನು ಸುದೃಢಗೊಳಿಸಲು ಶ್ರಮಿಸಬೇಕು.

ಸುಧಾರಣೆಯ ಸೂಕ್ತ ವಿಧಾನ

ಮುಸ್ಲಿಮ್ ಸಮಾಜವು ಧಾರ್ಮಿಕವಾಗಿ ಅಧಃಪತನಗೊಳ್ಳುತ್ತಿರುವ ಕಾರಣದಿಂದಾಗಿ ಅವರ ಸಾಮಾಜಿಕ ಜೀವನದಲ್ಲಿ ಅನೇಕ ರೀತಿಯ ಕೆಡುಕುಗಳು ಸೃಷ್ಟಿಯಾಗಿವೆ ಎಂಬುದನ್ನು ನಿರಾಕರಿಸುವಂತಿಲ್ಲ, ಸ್ತ್ರೀಯರು ಪುರುಷರ ಬಾಧ್ಯತೆಗಳನ್ನು ಈಡೇರಿಸುವುದರಲ್ಲಾಗಲೀ, ಪುರುಷರು ಸ್ತ್ರೀಯರ ಬಾಧ್ಯತೆಗಳನ್ನು ಈಡೇರಿಸುವುದರಲ್ಲಾಗಲೀ ಹೆಚ್ಚು ಆಸಕ್ತಿ ತೋರುವುದಿಲ್ಲ, ಪೌರುಷದ ಆಧಾರದಲ್ಲಿ ಪುರುಷನಿಗೆ ಇಸ್ಲಾಮ್ ನೀಡಿರುವ ಅಧಿಕಾರಿಗಳು ಹಲವೊಮ್ಮೆ ದುರುಪಯೋಗಗೊಳ್ಳುತ್ತವೆ. ಆದರೆ ಇದಕ್ಕೆ ಇಸ್ಲಾಮ್ ಧರ್ಮವಾಗಲೀ, ಧರ್ಮ ಸಂಹಿತೆಯಾಗಲೀ ಸರ್ವಥಾ ಹೊಣೆಯಲ್ಲ, ಬದಲಾಗಿ ಸಮಾಜದ ವ್ಯಕ್ತಿಗಳೇ ಇದಕ್ಕೆ ಹೊಣೆಗಾರರಾಗುತ್ತಾರೆ. ಯಾಕೆಂದರೆ ಅವರು ಇಸ್ಲಾಮಿನ ನೀತಿಗಳನ್ನು ಅನುಸರಿಸದೆ ಇದ್ದುದರಿಂದಲೇ ಪ್ರಸ್ತುತ ಪರಿಸ್ಥಿತಿ ನಿರ್ಮಾಣವಾಗಿದೆ.

ಆದ್ದರಿಂದ ಸಮಾಜದ ಕೆಡುಕುಗಳಿಗೆ ಧರ್ಮ ಸಂಹಿತೆಯೇ ಹೊಣೆ ಎಂದು ಆರೋಪಿಸಿ, ಧರ್ಮಬಾಹಿರ ನೀತಿ ಸಂಹಿತೆಗಳ ಮೂಲಕ ಸುಧಾರಣೆಗೆ ಯತ್ನಿಸುವುದು ಒಂದು ತಪ್ಪು ಚಿಕಿತ್ಸೆಯಾಗುತ್ತದೆ. ಇದು ಎಷ್ಟು ಮಾತ್ರಕ್ಕೂ ಸರಿಯೆನಿಸಲಾರದು. ಇಂದು ಮುಸ್ಲಿಮ್

ಸಮಾಜವನ್ನು ನೋಡಿದರೆ ಅಲ್ಲಿ ಜೀವನದ ಯಾವ ವಿಭಾಗವೂ ಕೆಡುಕು ಹಾಗೂ ದೋಷಗಳಿಂದ ಪೂರ್ತಿ ಮುಕ್ತವಾಗಿ ಕಾಣಲಾರದು. ಆಗ ಇದಕ್ಕೆಲ್ಲಾ ಧರ್ಮ ಸಂಹಿತೆಯೇ ಹೊಣೆಯೆಂದು ದೂಷಿಸಿ ಇಸ್ಲಾಮನ್ನೇ ರದ್ದುಗೊಳಿಸಬೇಕಾದೀತು. ಹಾಗೂ ಎಲ್ಲಾ ಸಮಸ್ಯೆಗಳಿಗೂ ಆಧುನಿಕ ಸಂಸ್ಕೃತಿಯಲ್ಲೇ ಪರಿಹಾರ ಶೋಧಿಸಬೇಕಾದೀತು.

ಇಸ್ಲಾಮಿನ ಬಗ್ಗೆ ಈ ದ್ವೇಷ ನೀತಿ ಹಾಗೂ ಆಧುನಿಕ ಸಂಸ್ಕೃತಿಯ ಬಗೆಗಿನ ಈ ಪ್ರೇಮಾದರವು 'ವಿಷವನ್ನು ಅಮೃತ'ವೆನ್ನುವುದು ಎಂದು ವರ್ಣಿಸಿದರೆ ತಪ್ಪಾಗದು.

ನಿಜವಾಗಿ ಸಮಾಜದಲ್ಲಿ ಸುಧಾರಣೆ ಆಗಬೇಕಾದರೆ ಅವರಲ್ಲಿ ದೇವಭಕ್ತಿಯನ್ನು ಉಂಟುಮಾಡಲು, ಅವರಿಗೆ ಧರ್ಮದ ಶಿಕ್ಷಣಗಳೇನೆಂದು ಕಲಿಸಲು, ಅವರ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸಲು ಮತ್ತು ಅವರ ಜೀವನೋದ್ದೇಶದ ಕುರಿತು ಅವರಲ್ಲಿ ಪ್ರಜ್ಞೆ ಮೂಡಿಸಲು ಶ್ರಮಿಸಬೇಕಾಗಿದೆ. ಜನರು ಇಸ್ಲಾಮನ್ನು ಒಂದು ಜೀವನ ವ್ಯವಸ್ಥೆಯಾಗಿ ಅಳವಡಿಸಿಕೊಳ್ಳುವಂತೆ ಹಾಗೂ ಜೀವನದ ಎಲ್ಲ ರಂಗಗಳಲ್ಲಿ ಇಸ್ಲಾಮನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮೊದಲು ಶ್ರಮಿಸಬೇಕಾಗಿದೆ.

ಇದೇ ವೇಳೆ ಸಮಾಜದ ಪ್ರಚಲಿತ ಅವಸ್ಥೆಯ ಹಿನ್ನೆಲೆಯಲ್ಲಿ ಶರೀಅತ್(ಧರ್ಮಸಂಹಿತೆ) ಕಾನೂನುಗಳು ಎಷ್ಟರ ಮಟ್ಟಿಗೆ ಸರಿಯಾಗಿ ಅನುಷ್ಠಾನಗೊಳ್ಳುತ್ತಿವೆ ಹಾಗೂ ಮಹಿಳೆಯರು ಎಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎಂಬಿತ್ಯಾದಿಗಳ ಕುರಿತು ಒಂದು ಸೂಕ್ತ ಅಧ್ಯಯನ ಅಗತ್ಯವಿದೆ. ಈ ಹಿನ್ನೆಲೆಯಲ್ಲೇ ತಲಾಕ್, ಖುಲಾ ಇತ್ಯಾದಿ ಸಮಸ್ಯೆಗಳ ಬಗ್ಗೆ ಚಿಂತಿಸಿ ಈ ನಿಟ್ಟಿನಲ್ಲಿ ಇರುವ ದೋಷಗಳನ್ನು ನಿವಾರಿಸುವ ಶ್ರಮವೂ ನಡೆಯಬೇಕಾಗಿದೆ.

ಪರಿಸ್ಥಿತಿ ಮತ್ತು ವಾತಾವರಣಕ್ಕೆ ಸೂಕ್ತವಾಗಿ, ಶರೀಅತ್‌ನ ವಾಸ್ತವಿಕ ಇಂಗಿತವನ್ನು ಪೂರ್ತಿಗೊಳಿಸುವುದಕ್ಕಾಗಿ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಪರಿಧಿಯೊಳಗೇ ಇದ್ದು ಸಮಸ್ಯೆಗಳಿಗೆ ಪರಿಹಾರ ಕಂಡು ಹುಡುಕಲು ಮತ್ತು ನಿಯಮಗಳನ್ನು ರಚಿಸಲು ಇಸ್ಲಾಮಿನಲ್ಲಿ ಖಂಡಿತ ಅವಕಾಶವಿದೆ. ಆದರೆ ಇದು ಯಾರೋ ಮಾಡಬೇಕಾದ ಕಾರ್ಯವಲ್ಲ. ಆಧುನಿಕ ಸಂಸ್ಕೃತಿಯಿಂದ ಪ್ರಭಾವಿತರಾದವರು ಹಾಗೂ ರಾಜಕೀಯ ಸಂದರ್ಭ ಸಾಧಕರು ಮಾಡಬೇಕಾದ ಕಾರ್ಯವೂ ಇದಲ್ಲ. ಇಂಥವರು ಒಂದು ವೇಳೆ ಇಜ್ತಿಹಾದ್‌ಗೆ(ಸಂಶೋಧನೆ) ಕುಳಿತರೆ ಖಂಡಿತವಾಗಿಯೂ ಇವರು ಧರ್ಮದ ರೂಪವನ್ನೇ ವಿಕೃತಗೊಳಿಸಿಬಿಡಬಹುದು.

ಧರ್ಮದ ವಿಶಾಲ ಜ್ಞಾನವನ್ನು ಹೊಂದಿರುವ ಹಾಗೂ ದೇವಭಕ್ತರೂ ಸತ್ಯಸಂಧರೂ ಆದ, ಜೊತೆಗೆ ಆಧುನಿಕ ಜ್ಞಾನವನ್ನೂ ಹೊಂದಿರುವ ಮಂದಿ ಈ ಕಾರ್ಯವನ್ನು ನೆರವೇರಿಸಬೇಕಾಗಿದೆ. ಅಲ್ಲಾಹನ ಕೃಪೆಯಿಂದ ಈಗ ಅಂತಹ ವ್ಯಕ್ತಿಗಳು ಆ ಬಗ್ಗೆ ಗಮನ ಹರಿಸುತ್ತಿದ್ದಾರೆ. ಹಾಗು ಸಾಮೂಹಿಕ ನೆಲೆಯಲ್ಲಿ ಆ ಕುರಿತು ಚಿಂತಿಸಲಾರಂಭಿಸಿದ್ದಾರೆ. ಆ ಮೂಲಕ ಮಾತ್ರ ನಮ್ಮೆದುರು ಇರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸಿಗಲು ಸಾಧ್ಯ.

❖❖❖